ಮಾಡುತ್ತಾರೆ. ಅದಕ್ಕೆ ದಯವಿಟ್ಟು ಪೋಲಿಸ್ ವರದಿಯಿಂದ ಅದನ್ನು ತರಿಸಿಕೊಳ್ಳತಕ್ಕಂತಹ ವ್ಯವಸ್ಥೆ ಮಾಡಬೇಕು.

ಉಪಾಧ್ಯಕ್ಷರು: ಗೃಹ ಖಾತೆ ಸಚಿವರಿಂದ ಉತ್ತರ ಕೊಡಿಸುತ್ತೇವೆಂದು ಹೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ: ಸಿಂಧ್ಯಾರವರು ಹೋಮ್ ಮಿನಿಸ್ಟರ್ ಬಂದ ಮೇಲೆ ಸಂಪೂರ್ಣ ಮಾಹಿತಿ ಕೊಡಿಸುತ್ತೇವೆಂದು ಹೇಳಿದ್ದಾರೆ.

ಅನುದಾನದ ಬೇಡಿಕೆಗಳ ಮೇಲಿನ ಚರ್ಚೆ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

+ ಶ್ರೀ ಕೆ.ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ): ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಬೇಡಿಕೆ ಮೇಲೆ ಮಾತನಾಡತಕ್ಕಂತಹ ಸಂದರ್ಭದಲ್ಲಿ ಇದನ್ನು ವಿರೋಧಿಸುತ್ತಾ ನಾನು ನನ್ನ ಮಾತುಗಳನ್ನು ಪ್ರಾರಂಭ ಮಾಡುವುದಕ್ಕೆ ಇಷ್ಟಪಡುತ್ತೇನೆ. ಗ್ರಾಮೀಣಾಭಿವೃದ್ಧಿಯ ಮೂಲ ಉದ್ದೇಶ ಗ್ರಾಮದ ಮೂಲ ಭೂತ ಬೇಡಿಕೆಗಳನ್ನು ಹಾಕಿಕೊಳ್ಳತಕ್ಕಂಥದ್ದು, ಈ ಹಿಂದೆ ಜಿಲ್ಲಾ ಬೋರ್ಡ್ ಎಂದು ಇತ್ತು. ಆ ನಂತರ ತಾಲ್ಲೂಕು ಬೋರ್ಡ್ ಎಂದು ಇತ್ತು, ಅದರ ನಂತರ ಮಂಡಲ ಪಂಚಾಯಿತಿ, ಜಿಲ್ಲಾ ಪರಿಷತ್ತು ಅಸ್ತಿತ್ವಕ್ಕೆ ಬಂದವು. ಈಗ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳ ಮುಖಾಂತರ ಜನರ ಕೈಗೆ ಅಧಿಕಾರವನ್ನು ಕೊಡತಕ್ಕಂತಹ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕು ಅನ್ನತಕ್ಕಂತಹ ಇಚ್ಚೆ ತಮ್ಮಲ್ಲಿ ಇದೆ. ನಾನು ಸಚಿವರ ಹತ್ತಿರ ಈ ವಿಚಾರವನ್ನು ಕೇಳುವುದಕ್ಕೆ ಇಷ್ಟ ಪಡುತ್ತೇನೆ. ಈ ಗ್ರಾಮ ಪಂಚಾಯಿತಿಗಳು ಗ್ರಾಮದ ಸರ್ವತೋಮುಖ ಅಭಿವೃದ್ಧಿಯಲ್ಲಿ ಅಥವಾ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆ, ಎಷ್ಟು ಸಾಧನೆ ಮಾಡಿದೆ ಅನ್ನತಕ್ಕಂತಹ ವಿಚಾರಗಳ ಬಗ್ಗೆ ತಾವು ಚಿಂತನೆ ಮಾಡತಕ್ಕಂತಹ ಸಂದರ್ಭದಲ್ಲಿ ಬಹುಶಃ ಎಷ್ಟು ಯಶಸ್ವಿಯಾಗಿದೆ, ಮಂಡಲ ಪಂಚಾಯಿತಿ ಆದಾಗ ಅಲ್ಲಿ ಯಶಸ್ವಿಯಾಯಿತು ಎಂದು ಬದಲಾವಣೆ ಮಾಡಿದೆವು, ಗ್ರಾಮ ಪಂಚಾಯಿತಿ ಬಂದು ಗ್ರಾಮ ಪಂಚಾಯಿತಿಯಲ್ಲಿ ಸಾಧನೆ ಮಾಡಿದ್ದೇವೆ ಎಂದು ಬದಲಾವಣೆ ಮಾಡಿದೆವು. ಈಗ ಅಮೆಂಡ್‌ಮೆಂಟ್ ಬಂದಿತು ಆದರೂ ಸಹ ನಾವು ನಿರೀಕ್ಷಿತ ಮಟ್ಟದಲ್ಲಿ ಆ ಹಂತಕ್ಕೆ ತಲುಪಿದ್ದೇವೆ ಅನ್ನತಕ್ಕಂತಹ ವಿಚಾರ ಬಹುಶಃ ಯಾವ ಹಂತಕ್ಕೆ ನಾವು ತಲುಪಬೇಕಾಗಿದೆ ಆ ಹಂತಕ್ಕೆ ತಲುಪಿಲ್ಲ. ಪೂರ್ಣ ಪ್ರಮಾಣದಲ್ಲಿ ಯಶಸ್ವಿಯಾಗಿಲ್ಲ. ಇದರಲ್ಲಿ ಎರಡು ಮಾತಿಲ್ಲ. ಅಲ್ಲಿ ಕೂತು ಹೇಳಿದರೂ ಅದನ್ನೇ ಹೇಳುವುದು, ಇಲ್ಲಿ ಕೂತು ಹೇಳಿದರೂ ಅದನ್ನೇ ಹೇಳುವುದು. ಈ ಹಂತದಲ್ಲಿ ಗ್ರಾಮ ಪಂಚಾಯಿತಿಗಳು ನಿರೀಕ್ಷಿತ ಮಟ್ಟದಲ್ಲಿ ಸಾಧನೆಯನ್ನು ಮಾಡುವುದಕ್ಕೆ ಆಗಲಿಲ್ಲ. ಗ್ರಾಮ

ಪಂಚಾಯಿತಿಗಳಿಗೆ ಏನು ಕೊಡುವುದಕ್ಕಾಗುತ್ತದೆ, ಒಂದು ನಿವೇಶನ ಇದ್ದರೆ ನಿವೇಶನ ಕೊಡುವುದಕ್ಕಾಗುತ್ತದೆ, ಮನೆ ಇಲ್ಲದವರಿಗೆ ಮನೆಯ ಮಂಜೂರಾತಿ ಹಂತವನ್ನು ನೋಡಿ ಮನೆಯನ್ನು ಕೊಡುವುದಕ್ಕಾಗುತ್ತದೆ, ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಿ ಕೊಡುವುದಕಾಗುತ್ತದೆ. ಸಾರಿಗೆ ಸಂಪರ್ಕ ವ್ಯವಸ್ಥೆ ಕಾಲು ಸೇತುವೆಗಳನ್ನು ಮಾಡುವ ಮೂಲಕ ಸಂಪರ್ಕ ವ್ಯವಸ್ಥೆ ಮಾಡಿ ಕೊಡುವುದಕ್ಕಾಗುತ್ತದೆ ದಾರಿ ದೀಪ ಅಥವಾ ವಿದ್ಯುಚ್ಛಕ್ತಿಯ ಸುಧಾರಣೆಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಕೆಲಸ ಮಾಡುವುದಕ್ಕಾಗುತ್ತದೆ, ಆರೋಗ್ಯ ಮತ್ತು ಶುಚಿತ್ವದ ಬಗ್ಗೆ ಕೆಲಸವನ್ನು ಮಾಡುವುದಕ್ಕಾಗುತ್ತದೆ, ಇವುಗಳೆಲ್ಲವನ್ನೂ ಗ್ರಾಮ ಸೇವೆಗಳ ಮುಖಾಂತರ, ಗ್ರಾಮ ಪಂಚಾಯಿತಿಗಳ ಮುಖಾಂತರ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡತಕ್ಕಂತಹ ಕೆಲಸವನ್ನು ತಾವು ಮಾಡುತ್ತೀರಿ. ಒಂದು ಪ್ರಶ್ನೆಯನ್ನು ನಾನು ನೇರವಾಗಿ ಸನ್ಮಾನ್ಯ ಸಚಿವರಲ್ಲಿ ಕೇಳುತ್ತೇನೆ, ತಾವು ಗ್ರಾಮ ಸಭೆಯನ್ನು ಕರೆಯತಕ್ಕಂತಹ ಮೂಲ ಉದ್ದೇಶ ಏನು, ಗ್ರಾಮ ಸಭೆಗಳ ವಿಫಲವಾಗುವುದಕ್ಕೆ ಕಾರಣ ಏನು? ಗ್ರಾಮ ಸಭೆಗಳಿಗೆ ಅಧಿಕಾರಿಗಳು ಬಾರದೆ ಇರುವುದಕ್ಕೆ ಕಾರಣವೇನು, ಗ್ರಾಮ ಸಭೆಗಳು ತೆಗೆದುಕೊಂಡ ನಿರ್ಣಯಕ್ಕೆ ಅಧಿಕಾರಿಗಳು ಸ್ಪಂದಿಸದ ಇರುವುದಕ್ಕೆ ಕಾರಣವೇನು? ಇವುಗಳನ್ನು ಸರಿಪಡಿಸುವುದಕ್ಕೆ ತಮ್ಮಲ್ಲಿ ಏನಾದರೂ ಕಾರ್ಯಕ್ರಮ ಇದೆಯಾ? ಈ ಕಾನೂನು ಕಾಯಿದೆಗಳು ಕೆಲಸ ಮಾಡಬೇಕಾದರೆ ಅಧಿಕಾರಿಗಳು ಸಹಕಾರ ಕೊಡಬೇಕಾಗುತ್ತದೆ. ಜನ ಪ್ರತಿನಿಧಿಗಳು ಸಹಕಾರ ಕೊಡಬೇಕಾಗುತ್ತದೆ. ಇವತ್ತು ಗ್ರಾಮ ಸಭೆಗಳಲ್ಲಿ ಜನ ಬರುತ್ತಿಲ್ಲ. ಬಹುಶಃ ನಾವು ಕೊಡತಕ್ಕಂತಹ ಒಂದು ಮನೆಗೆ ಅಥವಾ ಅಂಬೇಡ್ಕರ್ ಮನೆಯನ್ನು ಕೊಡಬೇಕಾದರೂ ನಾಲ್ಕು ಆಶ್ರಯ ಮನೆ ಕೊಡಬೇಕಾದರೆ ಗ್ರಾಮದಲ್ಲಿ ಇರತಕ್ಕಂತಹ 500 ರಿಂದ 400 ಫಲಾನುಭವಿಗಳನ್ನು ಕರೆದು ಮೈಕ್‌ನಲ್ಲಿ ಅನೌನ್ಸ್ ಮಾಡಿ 300 ಜನರಿಗೆ 100 ಮನೆ ಕೊಡತಕ್ಕಂತಹ ಪರಿಸ್ಥಿತಿ ನಿರ್ಮಾಣವಾಗಿರುವುದನ್ನು ನಾವು ಕಾಣುತ್ತಿದ್ದೇವೆ. ಅವರು ಬಹಳಷ್ಟು ಆಸೆ ಆಕಾಂಕ್ಷೆಗಳಿಂದ ಈ ಗ್ರಾಮ ಸಭೆಗಳಲ್ಲಿ ಭಾಗವಹಿಸುತ್ತಾರೆ. ಅಲ್ಲಿ ತಮ್ಮ ಸಮಸ್ಯೆಗಳನ್ನು ಹೇಳುತ್ತಾರೆ. ಸಮಸ್ಯೆಗಳನ್ನು ಹೇಳುವ ಸಂದರ್ಭದಲ್ಲಿ ಪರಿಹಾರ ಯಾವ ಹಂತದಲ್ಲಿ ಆಗುತ್ತಿದೆ, ಬಹುಶಃ ತಾವು ನಿರ್ಣಯ ಮಾಡಿದ್ದು ಆ ನಿರ್ಣಯಕ್ಕೆ ಮುಂದಿನ ಆರು ತಿಂಗಳಲ್ಲಿ ತಮ್ಮ ಕಾರ್ಯಕ್ರಮಗಳನ್ನು ಏನು ಮಾಡುತ್ತಿದ್ದೀರಿ ಅನ್ನತಕ್ಕಂಥದ್ದನ್ನು ಜನರಿಗೆ ವಿವರಿಸಬೇಕಾಗುತ್ತದೆ. ಬಹುಶಃ ಗ್ರಾಮ ಪಂಚಾಯಿತಿ ಅಸ್ತಿತ್ವಕ್ಕೆ ಬಂದಾಗ ಏನು ನಿರ್ಣಯಗಳಾಗಿವೆ ಅದೇ ನಿರ್ಣಯಗಳನ್ನು ಮುಂದುವರೆಸಿಕೊಂಡು ಹೋಗುತ್ತೀರೇ ಹೊರತು ಯಾವುದೇ ಬದಲಾವಣೆಗಳನ್ನು ಯಾವುದೇ ಸರ್ಕಾರ ಬಂದ ಕೂಡಲೇ ಮಾಡುವುದಕ್ಕಾಗಲಿಲ್ಲ. ಬಹುಶಃ ಆ ದಿನಗಳಲ್ಲಿ ನಜೀರ್‌ಸಾಬ್‌ರವರು ಮಾತನಾಡತಕ್ಕಂತಹ ಸಂದರ್ಭದಲ್ಲಿ ಬಹಳ ಉತ್ಸುಕತೆಯಿಂದ ಇದ್ದು ಗ್ರಾಮ ಪಂಚಾಯಿತಿಗಳು, ಜಿಲ್ಲಾ ಪಂಚಾಯಿತಿಗಳು, ಮಂಡಲ ಪಂಚಾಯಿತಿಗಳ ಬಗ್ಗೆ ಮಾತನಾಡುತ್ತಿದ್ದರು. ಅದೇ ಆಸೆ ಆಕಾಂಕ್ಷೆಗಳನ್ನು ತಾವು ಹೊಂದಿದ್ದು ಕೆಲಸ

ಮಾಡತಕ್ಕಂತಹ ಇಚ್ಛೆ ಇದೆ. ಆ ಇಚ್ಛೆ ಸಮರ್ಪಕವಾಗಿ ನಿರ್ವಹಿಸುವುದಕ್ಕಾಗುತ್ತಿಲ್ಲ. ಯಾವ ಗ್ರಾಮ ಪಂಚಾಯಿತಿ ಇವತ್ತು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿಲ್ಲ. ಈ ರಾಜ್ಯದಲ್ಲಿರತಕ್ಕಂತಹ ಎಲ್ಲಾ ಗ್ರಾಮ ಪಂಚಾಯಿತಿಗಳ ಕಾರ್ಯದರ್ಶಿಯವರ ಮೇಲೆ ಆಪಾದನೆ ಇದೆ. ತನಿಖೆ ಮಾಡಿದರೆ ಎಲ್ಲರೂ ಸಿಗುತ್ತಾರೆ. ಅಲ್ಲಿಂದ ಒಂದು, ಇಲ್ಲಿ ಒಂದು ತಪ್ಪಿ ಹೋಗಿರಬಹುದು, ಆದರೆ ಇವತ್ತು ಎಲ್ಲಾ ಹಂತದಲ್ಲೂ ಆಪಾದನೆಗಳನ್ನು ಹೊಂದಿರತಕ್ಕಂತಹ ಕಾರ್ಯದರ್ಶಿಗಳನ್ನು ತಾವು ಇಟ್ಟುಕೊಂಡು ಕೆಲಸ ಮಾಡುತ್ತಿದ್ದೀರಿ. ಅವರನ್ನು ಬದಲಾವಣೆ ಮಾಡಿದರೆ ನಿಮಗೆ ಬದಲಿ ವ್ಯವಸ್ಥೆ ಇಲ್ಲ. ನಾನು ಒಂದು ಪ್ರಶ್ನೆ ಕೇಳಿದೆ, ಜಿಲ್ಲಾ ಪಂಚಾಯಿತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿಯ ಕಳೆದ ಮೂರು ವರ್ಷಗಳಿಂದ ಯಾವ ಯಾವ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಮೇಲೆ ಆರ್ಥಿಕ ಅವ್ಯವಹಾರದ ದೂರುಗಳು ಸರ್ಕಾರಕ್ಕೆ ಬಂದಿವೆ ಎಂದು ಪ್ರಶ್ನಕೇಳಿದೆ, ಅದರಲ್ಲಿ ಕೊಟ್ಟಿರತಕ್ಕಂತಹ ಉತ್ತರದಲ್ಲಿ ಎಷ್ಟು ಜನರಿಗೆ ಅಮಾನತ್ತು ಮಾಡಿದ್ದೀರಿ ಎಂದು ಕೇಳಿದೆ, ಐದು ಜನರಿಗೆ ಅಮಾನತ್ತಿನಲ್ಲಿಟ್ಟಿದ್ದೇವೆ, ಇಲ್ಲಿ ಈ ವ್ಯವಸ್ಥೆ ಇದೆ ಎಂದರೆ, ಗ್ರಾಮ ಪಂಚಾಯಿತಿಯಲ್ಲಿ ಮಾಡಿರುವ ಅವ್ಯವಹಾರವನ್ನು ಸತತವಾಗಿ ರಕ್ಷಣೆ ಮಾಡತಕ್ಕಂತಹ ಅಧಿಕಾರಿಗಳು ಜಿಲ್ಲಾ ಪಂಚಾಯಿತಿಯಲ್ಲಿ, ತಾಲ್ಲೂಕು ಪಂಚಾಯಿತಿಯಲ್ಲಿದ್ದಾರೆ. ಸುಮಾರು 5-6 ವರ್ಷಗಳಿಂದ ಅದೇ ಸ್ಥಳದಲ್ಲಿ ಕೂತುಕೊಂಡು ಅವರಿಗೆ ಶಾಶ್ವತವಾಗಿ ರಕ್ಷಣೆ ಕೊಡತಕ್ಕಂತಹ ಅಧಿಕಾರಿಗಳಿದ್ದಾರೆ. ಆದ್ದರಿಂದ ನಾವು ಏನೇ ಆಪಾದನೆ ಮಾಡಿದರೂ, ತನಿಖೆ ಮಾಡಿದರೂ ಆ ತನಿಖೆಯ ಫಲಿತಾಂಶ ಸಿಗುವುದು ಬಹಳಷ್ಟು ಕಷ್ಟ ಇದೆ. ನಾನು ಮೂರು ವರ್ಷಗಳ ಹಿಂದಿನದನ್ನು ನಾನು ಹೇಳುತ್ತಿದ್ದೇನೆ. ಆ ಮೂರು ವರ್ಷಗಳ ಹಿಂದೆ ನಡೆದ ಘಟನೆಗಳಿಗೆ ನಿಮಗೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಮತ್ತೊಂದು ವಿಚಾರವನ್ನು ನಾನು ಹೇಳುತ್ತಿದ್ದೇನೆ, ಈ ಒಂದು ಗ್ರಾಮ ಪಂಚಾಯಿತಿಯಲ್ಲಿ ಎಷ್ಟು ಮನೆಗಳನ್ನು ಕೊಡುವುದಕ್ಕಾಗುತ್ತದೆ. ಒಂದು ಗ್ರಾಮ ಪಂಚಾಯಿತಿಯಲ್ಲಿ ನಾಲ್ಕು ಮನೆ ಕೊಡುವುದಕ್ಕೆ ಸಾಧನೆಯಾ? ಒಂದು ಅಂಬೇಡ್ಕರ ಎರಡು ಮನೆ ಕೊಡುವುದು ಸಾಧನೆಯಾ? ಅದಕ್ಕೋಸ್ಕರ ಒಂದು ಗ್ರಾಮ ಪಂಚಾಯಿತಿ ಅಸ್ತಿತ್ವಕ್ಕೆ ಬರಬೇಕಾ? ಅದಕ್ಕೋಸ್ಕರ ಒಂದು ಗ್ರಾಮ ಸಭೆ ಕರೆಯಬೇಕಾ? ಬಹುಶಃ ನಾಲ್ಕು ಮನೆ ಕೊಡಬೇಕಾದರೆ ನಾಲ್ಕು ಸದಸ್ಯರಿಗೆ ಹುಡುಕಿ ಕೊಡಿ ಎಂದು ಹೇಳಿದರೆ ಹುಡುಕಿ ಕೊಡುತ್ತಾರೆ. ಆದರೆ ಇವತ್ತು ಆ ವ್ಯವಸ್ಥೆ ಮೂಲಕ ಬಂದಿರತಕ್ಕಂತಹ ಗ್ರಾಮ ಗ್ರಾಮ ಸಭೆಗಳು ಯಶಸ್ವಿಯಾಗಬೇಕಾದರೆ ಅವರ ಬೇಡಿಕೆಗಳಿಗೆ ಸ್ಪಂದಿಸತಕ್ಕಂತಹ ಕೆಲಸ ಆಗುತ್ತಿಲ್ಲ. ಈ ಗ್ರಾಮ ಪಂಚಾಯಿತಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತೇವೆ ಅನ್ನತಕ್ಕಂತಹ ಯೋಜನೆ ತಾವು ಹಾಕಿಕೊಂಡಿದ್ದೀರಿ. ಕಳೆದ 10 ವರ್ಷಗಳಿಂದ ಬೋರ್‌ವೆಲ್‌ಗಳನ್ನು ಗ್ರಾಮ ಪಂಚಾಯಿತಿಗಳಲ್ಲಿ ತೋಡುತ್ತಿದ್ದೀರಿ. 10 ವರ್ಷಗಳಿಂದ ಸತತವಾಗಿ ತೋಡುತ್ತಿದ್ದರೂ ಸಹ ಗ್ರಾಮ ಪಂಚಾಯಿತಿಯಲ್ಲಿ ಇರತಕ್ಕಂತಹ ನೀರಿನ ಅಭಾವವನ್ನು ತುಂಬುವುದಕ್ಕೆ ನಿಮಗೆ ಸಾಧ್ಯವಾಗುತ್ತಿಲ್ಲ. ಅದಕ್ಕೆ

ಕಾರಣವೇನು, ನಮಗೆ ಏಕೆ 10-15 ವರ್ಷಗಳಿಂದ ನೀವು ಪ್ರಾಮಾಣಿಕವಾಗಿ ಕುಡಿಯುವ ನೀರಿನ ಸಮಸ್ಯೆಯನ್ನು ನಿಭಾಯಿಸಬೇಕು ಅನ್ನತಕ್ಕಂತಹ ಉದ್ದೇಶವನ್ನು ಇಟ್ಟುಕೊಂಡು ಕೆಲಸವನ್ನು ಮಾಡುತ್ತಿದ್ದರೂ ಸಹ ಈ ಕೊರತೆಯನ್ನು ತುಂಬುವುದಕ್ಕಾಗುತ್ತಿಲ್ಲ ಅನ್ನತಕ್ಕಂತಹ ಚಿಂತನೆ. ಅದನ್ನು ರಿಪೇರಿ ಮಾಡತಕ್ಕಂತಹ ವ್ಯವಸ್ಥೆ ಇಲ್ಲ, ಅದರ ಆಳ ಪರೀಕ್ಷೆ ಮಾಡತಕ್ಕಂತಹ ವ್ಯವಸ್ಥೆ ಇಲ್ಲ. ಎಲ್ಲಿ ಬೋರ್‌ವೆಲ್ ಇದೆ ಎಂದು ನಿಮ್ಮ ಜಿಲ್ಲಾ ಪಂಚಾಯಿತಿಯವರಿಗೆ ಗೊತ್ತಿಲ್ಲ. ಎಲ್ಲಿ ತೋಡುತ್ತಿದ್ದೀರಿ, ಅಂಕಿ ಸಂಖ್ಯೆ ನಿಮ್ಮ ಹತ್ತಿರ ಇಲ್ಲ. ಗ್ರಾಮ ಪಂಚಾಯಿತಿಗಳಲ್ಲಿ ಎಷ್ಟು ಕೊಳವೆ ಬಾವಿಗಳನ್ನು ತೋಡಲಾಗಿದೆ, ಎಷ್ಟು ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿವೆ, ಎಷ್ಟು ಕೆಲಸ ನಿರ್ವಹಿಸುತ್ತಿಲ್ಲ, ಎಷ್ಟು ಹಾಳಾಗಿದೆ, ಎಷ್ಟು ದುರಸ್ತಿ ಮಾಡಬೇಕಾಗಿದೆ, ಎಲ್ಲೆಲ್ಲಿ ದುರಸ್ತಿ ಮಾಡಬೇಕಾಗಿದೆ ಅನ್ನತಕ್ಕಂತಹ ಅಂಕಿಸಂಖ್ಯೆಗಳ ವಿವರ ತಮ್ಮ ಹತ್ತಿರ ಇಲ್ಲ. ನಿಮ್ಮ ಸಿಬ್ಬಂದಿಯನ್ನು ಕಳುಹಿಸಿಕೊಡುವುದಕ್ಕೆ ಮುಂದಾಗುತ್ತೀರೇನೋ ಎಂದರೆ ಅವರಿಗೂ ಕೂಡ ಸ್ಥಳ ಗೊತ್ತಿಲ್ಲ, ಜಿಲ್ಲಾ ಪಂಚಾಯತಿಯವರಿಗೂ ಸ್ಥಳ ಗೊತ್ತಿಲ್ಲ, ಹೀಗಿದ್ದರೂ ಕೂಡ ನಾವೆಲ್ಲಾ ಸರಿ ಮಾಡುತ್ತೇವೆನ್ನುವ ಕೇವಲ ವಾದವನ್ನು ಮಾಡಿರುವ ಕಾರಣದಿಂದಲೇ ಈ ಕುಡಿಯುವ ನೀರಿನ ಸಮಸ್ಯೆಯನ್ನು ಸಮರ್ಪಕವಾಗಿ ನಿಭಾಯಿಸುವುದಕ್ಕೆ ಆಗದೇ ಇರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇನ್ನು ಕುಡಿಯುವ ನೀರಿನ ವ್ಯವಸ್ಥೆಗೋಸ್ಕರ ಕಿರು ನೀರು ಸರಬರಾಜು ಯೋಜನೆ ಇದೆ. ಈ ಯೋಜನೆ ಯಶಸ್ವಿಗೆ ವಿದ್ಯುತ್ ಇದ್ದು ನೀರು ಇದ್ದರೆ ಕುಡಿಯುವ ನೀರು ಸಮರ್ಪಕವಾಗಿ ಸಿಗುತ್ತದೆ. ಆದರೆ ಇಂದು ವಿದ್ಯುತ್ ಇಲ್ಲದೇ ಈ ಯೋಜನೆಯನ್ವಯ ನೀರು ಸಿಗುತ್ತಿಲ್ಲ. ಯಾವ ಸಮಯದಲ್ಲಿ ಕರೆಂಟ್ ಬರುತ್ತದೆ ಎನ್ನುವುದು ನಮ್ಮ ಜನರಿಗೆ ಗೊತ್ತಾಗುವುದೇ ಇಲ್ಲ, ಕಾರಣವೆಂದರೆ ಅದು ರಾತ್ರಿ 11 ಗಂಟೆಗೋ ಅಥವಾ 12 ಗಂಟೆಗೋ ಬರುತ್ತದೆ, ಆ ರೀತಿ ಕರೆಂಟ್ ಬಂದರೂ ಲೋ ವೋಲ್ಟೇಜ್‌ನಿಂದಾಗಿ ನೀರನ್ನು ಸ್ಟಾಕ್ ಮಾಡುವುದಕ್ಕೆ ಆಗುತ್ತಿಲ್ಲ, ಈ ಕಾರಣದಿಂದ ನೀವು ಎಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿದ್ದಾರೆ ಅಲ್ಲಿ ಕಿರು ನೀರು ಸರಬರಾಜು ಯೋಜನೆಗೆ ಬದಲಿ ವ್ಯವಸ್ಥೆಯಾಗಿ ಬೋರ್‌ವೆಲ್‌ಗಳನ್ನು ತೋಡಿ ಕೈಪಂಪ್‌ಗಳನ್ನು ಅಳವಡಿಸಿದರೆ ಮಾತ್ರ ನೀರಿನ ಸಮಸ್ಯೆ ಸ್ವಲ್ಪ ಪರಿಹಾರವಾಗುತ್ತದೆಯೇ ಹೊರತು ಅದನ್ನು ಮಾಡದೇ ಕೇವಲ ಕಿರು ನೀರು ಸರಬರಾಜು ಯೋಜನೆಯನ್ನೇ ನಂಬಿಕೊಂಡಿದ್ದರೆ ಬಹಳಷ್ಟು ಗಂಡಾಂತರವಾಗಿ ತೊಂದರೆಗೆ ಒಳಗಾಗತಕ್ಕಂಥ ಪರಿಸ್ಥಿತಿ ಬರುತ್ತದೆ. ಇದನ್ನು ನಾವು ಬಹಳಷ್ಟು ಕಡೆಗಳಲ್ಲಿ ನೋಡುತ್ತಿದ್ದೇವೆ. ಕೆಲವೊಂದು ಕಡೆಗಳಲ್ಲಿ ನಮಗೆ ಜನರುಗಳು ತೋರಿಸಿದ್ದಾರೆ, ಅಲ್ಲಿ ಒಂದು ಕೊಡ ನೀರು ತುಂಬುವುದೂ ಕೂಡ ಕಷ್ಟವಾಗಿದೆ, ಲೋ ವೋಲ್ಟೇಜ್‌ನಿಂದಾಗಿ ಸಮರ್ಪಕವಾಗಿ ನೀರು ಬರುವುದಿಲ್ಲ. ವಿದ್ಯುತ್ ಸರಬರಾಜನ್ನು ಟೂ ಫೇಸ್‌ನಲ್ಲಿ ಕೊಡುವುದರಿಂದ ನೀರು ಸರಬರಾಜಿಗೆ ತೊಂದರೆಯಾಗಿದೆ ಈ ಕಾರಣಗಳಿಂದ ಇಂದು ಯಾವುದೇ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸರಬರಾಜು ಸಮರ್ಪಕವಾಗಿ

ಆಗುತ್ತಿಲ್ಲವೆನ್ನುವುದನ್ನು ತಾವು ಒಪ್ಪಿಕೊಳ್ಳಲೇಬೇಕಾಗುತ್ತದೆ. ಬಹುಶಃ ತಾವು ಕೇವಲ ಅಂಕಿ ಸಂಖ್ಯೆಗಳ ಮೂಲಕ ಇಷ್ಟು ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿದ್ದೇವೆ, ಇಷ್ಟು ಬೋರ್‌ವೆಲ್‌ಗಳನ್ನು ತೋಡಿದ್ದೇವೆ, ಇಷ್ಟು ಕಿರು ನೀರಾವರಿ ಯೋಜನೆಗಳನ್ನು ಮಾಡಿದ್ದೇವೆ ಎಂದು ಸಾಧನೆಗೆ ಅಂಕಿ ಸಂಖ್ಯೆಗಳನ್ನು ನೀವು ಕೊಟ್ಟಿದ್ದೀರಿ ಹೊರತು ನಿಜವಾಗಿಯೂ ಕುಡಿಯುವ ನೀರಿನ ವ್ಯವಸ್ಥೆಗೆ ಜನರ ತೊಂದರೆಗೆ ನೀವು ಸ್ಪಂದಿಸುತ್ತಿಲ್ಲ. ಆದರೆ ನಾವು ಸ್ಪಂದಿಸುತ್ತಿದ್ದೇವೆ ಎನ್ನುವ ನಿಮ್ಮ ವಾದವೇನಿದೆ ಅದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಇನ್ನೊಂದು ಸಮಸ್ಯೆ ಮಾನ್ಯ ಅಧ್ಯಕ್ಷರ ಮೂಲಕ ಹೇಳುವುದೇನೆಂದರೆ ನಮ್ಮ ಜಿಲ್ಲೆಯಲ್ಲಿ ಒಂದು ಕಡೆ ಸಮುದ್ರವಿರುತ್ತದೆ ಹಾಗೂ ಮತ್ತೊಂದು ಕಡೆಯಲ್ಲಿ ಹೊಳೆ ಇರುತ್ತದೆ, ಈ ಹೊಳೆ ಇದ್ದರೂ ಕೂಡ ಅದರ ನೀರನ್ನು ಉಪಯೋಗಿಸುವುದಕ್ಕೆ ಬರುವುದಿಲ್ಲ, ಕಾರಣ ಅದು ಕುಡಿಯುವುದಕ್ಕೆ ಯೋಗ್ಯವಾದ ನೀರಲ್ಲ. ಆದಕಾರಣ ಅಲ್ಲಿ ಬಾವಿಯಿಂದ ನೀರು ತೆಗೆಯಬೇಕು ಅಥವಾ ಕೊಳವೆ ಬಾವಿಯಿಂದ ನೀರನ್ನು ತೆಗೆಯಬೇಕು. ಅಥವಾ ತೆರೆದ ಬಾವಿಯಿಂದ ನೀರನ್ನು ತೆಗೆಯಬೇಕು. ಈ ಕಾರಣದಿಂದ ಪ್ರತಿಯೊಂದು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸುಮಾರು 10 ಲಕ್ಷ ರೂ.ಗಳನ್ನು ಖರ್ಚು ಮಾಡಿ ಈ ನೀರು ಸರಬರಾಜು ಯೋಜನೆಯನ್ನೇನೋ ನೀವು ಪ್ರಾರಂಭ ಮಾಡುತ್ತೀರಿ, ಅದಕ್ಕಾಗಿ ಪೈಪ್‌ಲೈನ್‌ಗಳನ್ನು ಹಾಕುತ್ತೀರಿ, ಆದರೂ ಎಷ್ಟೋ ಕಡೆಗಳಲ್ಲಿ ನೀರು ಸಮರ್ಪಕವಾಗಿ ಸಿಗುತ್ತಿಲ್ಲ. ನನ್ನ ಅನಿಸಿಕೆಯ ಪ್ರಕಾರ ಇವೊತ್ತಿಗೂ ಎಷ್ಟೋ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಟ್ಯಾಂಕ್‌ಗಳಿಗೆ ನೀರನ್ನು ತುಂಬಿಯೇ ಎರಡ್ಮೂರು ವರ್ಷಗಳಾಗಿರಬಹುದು. ಇದಕ್ಕೆ ಕಾರಣ ಲೋ ವೋಲ್ಟೇಜ್, ಒಂದು ವೇಳೆ ರಾತ್ರಿ ವೇಳೆ ಕರೆಂಟ್ ಇದ್ದರೆ ಅಲ್ಲಿಯ ಲೈನಮನ್ ಹೋಗಿ ನೀರನ್ನು ತುಂಬಿಸುತ್ತಿಲ್ಲ, ಇಂಥ ಸಮಸ್ಯೆ ಇರತಕ್ಕಂಥ ಸಂದಿಗ್ಧ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಬಹುಶಃ ಇದಕ್ಕೆ ಬದಲಿ ವ್ಯವಸ್ಥೆಯನ್ನು ಮಾಡಲೇಬೇಕಾಗುತ್ತದೆ. ಬಹುಶಃ ಒಂದೇ ಯೋಜನೆಯಿಂದ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಎಲ್ಲಾ ಹಳ್ಳಿಗಳಿಗೆ ನೀರನ್ನು ಕೊಡುವುದಕ್ಕೆ ಆಗುತ್ತದೆ. ಇದರ ಬಗ್ಗೆ ಕಳೆದ ಬಾರಿ ಇಲ್ಲಿ ಪ್ರಸ್ತಾಪ ಮಾಡಿದ್ದೆ. ಬಹುಶಃ ಒಂದು ಪ್ಯಾರಲಲ್ ಲೈನ್‌ನ್ನು ಹಾಕಿಕೊಂಡು ಹೋಗಿ ಆ ಕಡೆ ಈ ಕಡೆ ಇರತಕ್ಕಂಥ ಎಲ್ಲಾ ಹಳ್ಳಿಗಳಿಗೆ ನೀರನ್ನು ಕೊಡಬಹುದು ಎನ್ನತಕ್ಕಂಥ ವಿಚಾರವನ್ನು ಕಳೆದ ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿದಾಗ ಅದಕ್ಕೆ ಲಿಖಿತ ಮೂಲಕ ತಾವು ಉತ್ತರವನ್ನು ಕೊಟ್ಟು ಅದರಲ್ಲಿ ಏನು ಹೇಳಿದ್ದೀರೆಂದರೆ ತಾಂತ್ರಿಕ ಆಡಳಿತ ವ್ಯವಸ್ಥೆಗೋಸ್ಕರ ಇದನ್ನು ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದಿರಿ. ಏಕೆಂದರೆ ಬಹುಶಃ ಮೇನ್‌ಟೆನೆನ್ಸ್ ಮಾಡುವುದಕ್ಕೆ ಕಷ್ಟವಾಗಬಹುದು. ಈ ಮೇನ್‌ಟೆನೆನ್ಸ್ ಮಾಡುವುದು ಕಷ್ಟ ಎನ್ನುವ ಒಂದು ಸಣ್ಣ ಕಾರಣಕ್ಕಾಗಿ ನಾವು ಲಕ್ಷಾಂತರ ರೂ.ಗಳನ್ನು ವೆಚ್ಚಮಾಡಿದರೂ ಕೂಡ ಇಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಡಿಯುವ ನೀರನ್ನು ಸಮರ್ಪಕವಾಗಿ ಪಡೆಯುವುದಕ್ಕೆ ಆಗದೇ ಇರತಕ್ಕಂಥ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಇದರ ಬಗ್ಗೆ ತಾವು ಗಂಭೀರವಾಗಿ

ಆಲೋಚನೆ ಮಾಡಬೇಕು. ಅಲ್ಲಿ ರಾಷ್ಟ್ರೀಯ ಹೆದ್ದಾರಿ ಇದೆ, ಅದರ ಬದಿಯಲ್ಲಿ ಎರಡೂ ಕಡೆಗಳಲ್ಲಿ ಗ್ರಾಮಾಂತರ ಪ್ರದೇಶಗಳಿವೆ, ಅಲ್ಲಿ ಬೇಕಾದಷ್ಟು ನೀರನ್ನು ಕುಡಿಯುವುದಕ್ಕೆ ನೀವು ಕೊಡಬಹುದು, ಅದೇ ರೀತಿ ಮಲೆನಾಡು ಇದೆ, ಅದರ ಎರಡೂ ಬದಿಗಳಲ್ಲಿ ಹೊಳೆಗಳಿವೆ, ಅಲ್ಲಿಂದ ನೀರನ್ನು ತಂದು ಶುದ್ಧೀಕರಿಸಿ ಗ್ರಾಮಾಂತರ ಪ್ರದೇಶಗಳಿಗೆ ಬೇಕಾದಷ್ಟು ನೀರನ್ನು ಕೊಡುವುದಕ್ಕೆ ಅಲ್ಲಿ ಅವಕಾಶವಿದೆ. ಆದರೆ ನೀವು ಇದನ್ನು ಉಪಯೋಗಿಸುತ್ತಿಲ್ಲ. ಇದನ್ನು ಮಾಡುವುದಕ್ಕೆ ನಿಜವಾಗಿಯೂ ತಾಂತ್ರಿಕ ತೊಂದರೆಯೋ ಅಥವಾ ನಿಮಗೆ ಇದರ ಬಗ್ಗೆ ಚಿಂತನೆ ಮಾಡುವುದಕ್ಕೆ ಸಮಯವಿಲ್ಲವೋ ಅಥವಾ ನಿಮ್ಮ ಅಧಿಕಾರಿಗಳು ನಿಮಗೆ ಬಿಡುತ್ತಿಲ್ಲವೋ ಅಥವಾ ಆಡಳಿತ ವ್ಯವಸ್ಥೆ ಕಷ್ಟವಾಗುತ್ತದೋ ಎಂಬ ಬಗ್ಗೆ ನನಗೆ ನಿರ್ದಿಷ್ಟವಾಗಿ ಗೊತ್ತಿಲ್ಲ. ಏಕೆಂದರೆ ನಾನು ಅದನ್ನು ನೋಡಿಲ್ಲ. ಆದರೆ ನಾನು ಹೇಳಿದ ಹಾಗೆ ಮಾಡಿದರೆ ಕುಡಿಯುವ ನೀರು ಗ್ರಾಮಾಂತರ ಪ್ರದೇಶಗಳಲ್ಲಿ ಸಮರ್ಪಕವಾಗಿ ಸಿಗುತ್ತದೆ. ಇನ್ನು ಗ್ರಾಮಸಭೆಗಳಲ್ಲಿ ಅಧಿಕಾರಿಗಳು ಬರಬೇಕು ಎಂದು ತಮ್ಮ ವಾದವಿದೆ. ಇದರ ಹಿನ್ನೆಲೆಯಲ್ಲಿ ನಾವು ಗ್ರಾಮ ಸಭೆಯಲ್ಲಿ ಏನು ನಿರ್ಣಯವನ್ನು ತೆಗೆದುಕೊಳ್ಳುತ್ತೇವೆಯೋ ಅದರ ಆಧಾರದ ಮೇಲೆ ಕೆಲಸವಾಗಬೇಕಾಗುತ್ತದೆ. ಬಹುಶಃ ಒಂದು ಶಾಲೆ ಬೇಕು ಎಂದಾಗ, ಆ ಶಾಲೆ ಬೇಕೋ ಅಥವಾ ಬೇಡವೋ ಎಂಬುದನ್ನು ಗ್ರಾಮಸಭೆಯಲ್ಲಿ ತೀರ್ಮಾನ ತೆಗೆದುಕೊಂಡ ಮೇಲೆ ಇದಕ್ಕೆ ಸಂಬಂಧಪಟ್ಟಂತೆ ಅಧಿಕಾರಿಗಳು ಉತ್ತರವನ್ನು ಕೊಡಬೇಕಾಗುತ್ತದೆ, ಆದರೆ ಅವರು ಉತ್ತರವನ್ನು ಕೊಡುವುದಿಲ್ಲ. ಬಹುಶಃ ಯಾವುದೇ ಒಂದು ಮೂಲಭೂತ ಬೇಡಿಕೆಗಳ ಬಗ್ಗೆ ಗ್ರಾಮ ಪಂಚಾಯತಿಯಲ್ಲಿ ನಿರ್ಣಯ ಮುಖಾಂತರ ಮಾಡಿದರೂ ಕೂಡ ಅದಕ್ಕೆ ಸ್ಪಂದಿಸತಕ್ಕಂಥ ಅಧಿಕಾರಿಗಳನ್ನು ನಾವು ಪಡೆದಿಲ್ಲ. ಆದಕಾರಣ ನಾವು ಇಂದು ಯಾವುದೇ ಉದ್ದೇಶವನ್ನು ಗ್ರಾಮ ಪಂಚಾಯತಿಯ ಮುಖಾಂತರ ಈಡೇರಿಸಿಕೊಳ್ಳುವುದಕ್ಕೆ ಆಗದೇ ಇರತಕ್ಕಂಥ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಇನ್ನು ತಮ್ಮ ಮುಖಾಂತರ ಪಡಿತರ ವ್ಯವಸ್ಥೆಯ ಬಗ್ಗೆ ಸರ್ಕಾರಕ್ಕೆ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಈ ಪಡಿತರ ವ್ಯವಸ್ಥೆ ಪ್ರತಿ ಗ್ರಾಮದಲ್ಲೂ ಸಮರ್ಪಕವಾಗಿ ಸಿಗಬೇಕಾದ ಅವಶ್ಯಕತೆ ಇದೆ. ಇದು ಗ್ರಾಮ ಪಂಚಾಯತಿ ಅಧಿಕಾರದ ವ್ಯಾಪ್ತಿಯ ಒಳಗೆ ಇರಲಿ ಅಥವಾ ಇಲ್ಲದಿರಲಿ, ಇಂದು ಪ್ರತಿ ಗ್ರಾಮದಲ್ಲಿ ಪಡಿತರ ವ್ಯವಸ್ಥೆ ಗ್ರಾಮ ಪಂಚಾಯತಿಯಡಿಯಲ್ಲಿ ತರಬೇಕಾಗುತ್ತದೆ. ಕಳೆದ ಸಾರಿ ನಮ್ಮ ಗ್ರಾಮ ಪಂಚಾಯತಿಯೊಳಗೆ ಒಂದು ನಿರ್ಣಯವನ್ನು ತೆಗೆದುಕೊಂಡು ಇದೇ ಗ್ರಾಮದಲ್ಲಿ ಪಡಿತರ ವ್ಯವಸ್ಥೆಯನ್ನು ಮಾಡಬೇಕಾದ್ದರಿಂದ ಅದಕ್ಕೆ ಬೇಕಾದಂಥ ಕಟ್ಟಡನ್ನು ನಾವು ಕಟ್ಟಿಸಿಕೊಡುತ್ತೇವೆ ಎನ್ನತಕ್ಕಂಥ ನಿರ್ಣಯವನ್ನು ಗ್ರಾಮಸಭೆಯಲ್ಲಿ ಮಾಡಿದರು. ಗ್ರಾಮ ಪಂಚಾಯತಿ ನಿರ್ಣಯ ಮಾಡಿತು, ತಾಲ್ಲೂಕು ಪಂಚಾಯತಿ ನಿರ್ಣಯ ಮಾಡಿತು, ಜಿಲ್ಲಾ ಪಂಚಾಯತಿ ಕೂಡ ಇದೇ ನಿರ್ಣಯವನ್ನು ಮಾಡಿತು. ಇಷ್ಟೆಲ್ಲಾ ನಿರ್ಣಯವನ್ನು ಮಾಡಿದರೂ ಕೂಡ ಜನ ಪ್ರತಿನಿಧಿಗಳ ಭಾವನೆಗೆ ಸ್ಪಂದಿಸತಕ್ಕಂಥ

ಅಧಿಕಾರಿಗಳನ್ನು ನಾವು ಪಡೆದಿಲ್ಲ. ಏಕೆಂದರೆ ಅದನ್ನು ಎನ್‌ಕ್ಯೆರಿಗೆ ಹಾಕಿದರು, ಎನ್‌ಕ್ಯೆರಿ ಹಾಕಿದಾಗ ಸೊಸೈಟಿಯಿಂದ, ಹಾಲು ಉತ್ಪಾದಕರ ಸಹಕಾರ ಸಂಘದಿಂದ, ವ್ಯವಸಾಯ ಸೇವಾ ಸಹಕಾರ ಸಂಘದ ಮುಖಾಂತರ ಮಾಡಿ ಎನ್ನತಕ್ಕಂಥ ವಾದವೇ ಹೊರತು ಬೇರೇನೂ ಉದ್ದೇಶವಲ್ಲ. ಆದುದರಿಂದ ಇಂಥ ಸಣ್ಣ ಪುಟ್ಟ ಕೆಲಸಗಳನ್ನೂ ಕೂಡ ಗ್ರಾಮಪಂಚಾಯತಿಯ ಮುಖಾಂತರ ಮಾಡಲು ಆಗದೇ ಇರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇವೊತ್ತು ಸ್ವಾತಂತ್ರ್ಯ ಬಂದು 50 ವರ್ಷಗಳಾಗಿದ್ದರೂ ಕೂಡ ನಾವು ನಮ್ಮ ಗ್ರಾಮದಲ್ಲಿ ಪಡಿತರ ವ್ಯವಸ್ಥೆಯನ್ನು ಸರಿಯಾಗಿ ಮಾಡಲು ಆಗುತ್ತಿಲ್ಲ. ಸಕ್ಕರೆ ಇವೊತ್ತು ಬೇಕು ತರುವುದಕ್ಕೆ ಅಲ್ಲಿ ಸಕ್ಕರೆ ಇರುವುದಿಲ್ಲ, ಸೀಮೆಎಣ್ಣೆ ಬೇಕು ಎಂದರೆ ಸೀಮೆಎಣ್ಣೆ ಸಿಗುವುದಿಲ್ಲ. ಬಹುಶಃ ಅವರ ಮರ್ಜಿಯಲ್ಲಿ ಜನರು ಇರಬೇಕಾಗುತ್ತದೆ. ಇವೊತ್ತಿನ ಪಡಿತರ ವ್ಯವಸ್ಥೆ ಹೇಗಿದೆಯೆಂದರೆ ಬೆಳಿಗ್ಗೆ ಸೀಮೆಎಣ್ಣೆ ತೆಗೆದುಕೊಂಡು ಬಂದರೆ ಮಧ್ಯಾಹ್ನ ಸಕ್ಕರೆ ತರುವುದಕ್ಕೆ ಹೋಗಬೇಕಾಗುತ್ತದೆ, ಏಕೆಂದರೆ ಸೀಮೆಎಣ್ಣೆ ಕೊಟ್ಟ ಕೈಯಲ್ಲಿ ಸಕ್ಕರೆಯನ್ನು ಕೊಡುವುದಕ್ಕೆ ಆಗುವುದಿಲ್ಲ, ಆ ರೀತಿ ಕೊಟ್ಟರೆ ಸಕ್ಕರೆ ವಾಸನೆ ಬರುತ್ತದಲ್ಲಾ ಆ ಕಾರಣಕ್ಕೆ ಸಕ್ಕರೆ ಕೊಡುವುದಕ್ಕೆ ಆಗುವುದಿಲ್ಲ. ಈ ಕಾರಣದಿಂದ ಬೆಳಿಗ್ಗೆ ಸೀಮೆಎಣ್ಣೆ ತರುವುದಕ್ಕೆ 3ರೂ.ಗಳನ್ನು ಕೊಡಬೇಕು ಮತ್ತು ಮಧ್ಯಾಹ್ನ ಸಕ್ಕರೆ ತರುವುದಕ್ಕೆ 3 ರೂ.ಗಳನ್ನು ಕೊಡಬೇಕು. ಈ ರೀತಿಯ ವ್ಯವಸ್ಥೆ ಗ್ರಾಮ ಪಂಚಾಯತಿಯ ಮೂಲದಲ್ಲಿ ಇದೆ. ಬಹುಶಃ ಇದಕ್ಕೆ ಬೇಕಾದಂಥ ಮೂಲ ಸೌಲಭ್ಯಗಳನ್ನು ಗ್ರಾಮ ಪಂಚಾಯತಿ ಕಲ್ಪಿಸಿಕೊಟ್ಟರೂ ಕೂಡ ನೀವು ಅದನ್ನು ಪಡಿತರ ವ್ಯವಸ್ಥೆಯಲ್ಲಿ ಸರಿಯಾಗಿ ಕೊಡುವುದಕ್ಕೆ ಆಗುತ್ತಿಲ್ಲ.

ಶ್ರೀ ಜಿ.ಬಸವಣ್ಣಪ್ಪ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪಡಿತರ ವ್ಯವಸ್ಥೆ ಬಗ್ಗೆ ಮಾತನಾಡಿದ್ದಾರೆ. ಈ ಪಡಿತರ ವ್ಯವಸ್ಥೆಯಲ್ಲಿ ನಾವು ಈಗ ಅನೇಕ ಸುಧಾರಣೆಗಳನ್ನು ತಂದಿದ್ದೇವೆ. ನಾವು ಪಡಿತರ ಅಂಗಡಿಯನ್ನು ಕೊಡಬೇಕಾದರೆ ನಾವು ಪ್ರಥಮ ಆದ್ಯತೆಯನ್ನು ಸಹಕಾರ ಸಂಘಗಳಿಗೆ ಕೊಡುತ್ತಿದ್ದೇವೆ. ಇತರೆಯವರಿಗೆ ಕೊಡಬಾರದಂದೇನೂ ಇಲ್ಲ, ಆದರೆ ಪ್ರಥಮ ಆದ್ಯತೆಯನ್ನು ಸಹಕಾರ ಸಂಘಗಳಿಗೆ ಕೊಡುತ್ತೇವೆ. ಗ್ರಾಮಸ್ಥರೆಲ್ಲರೂ ಸೇರಿಕೊಂಡು ಇಂಥ ಸ್ಥಳದಲ್ಲಿಯೇ ಇದು ಆಗಬೇಕೆಂದು ಹೇಳಿದಾಗ ನಾವು ಅದಕ್ಕೆ ಆದ್ಯತೆಯನ್ನು ಕೊಡಬೇಕಾಗುತ್ತದೆ. ಯಾವ ಅಧಿಕಾರಿ ಅಂಥದ್ದನ್ನು ಉಲ್ಲಂಘಿಸಿದ್ದಾರೆ ಅದರ ಬಗ್ಗೆ ನನ್ನ ಗಮನಕ್ಕೆ ತಂದರೆ ನಾನು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ಪ್ರತಾಪ್‌ಚಂದ್ರಶೆಟ್ಟಿ: ಸನ್ಮಾನ್ಯ ಅಧ್ಯಕ್ಷರೇ, ನಾನು ಅದೇ ವಿಚಾರದ ಬಗ್ಗೆ ವಾದವನ್ನು ಮಾಡುತ್ತಿದ್ದೇನೆ. ಸ್ವಾತಂತ್ರ್ಯ ಬಂದು 50 ವರ್ಷಗಳಾದರೂ ಪಡಿತರವನ್ನು ಗ್ರಾಮದಲ್ಲಿ ಪಡೆಯುತ್ತಿಲ್ಲ ಎನ್ನುವ ವಿಚಾರವಿದೆ. ಅದಕ್ಕೆ ಪೂರಕವಾದ ವ್ಯವಸ್ಥೆಯನ್ನು ಕಲ್ಪಿಸಬೇಕಾಗುತ್ತದೆ. ಇದಕ್ಕಾಗಿ ಗ್ರಾಮ ಪಂಚಾಯಿತಿ ಅಥವಾ ಗ್ರಾಮ ಸಭೆಗಳೇ ನಿರ್ಣಯಗಳೇ ಸಾಕಾಗುತ್ತದೆಯಾದ ಕಾರಣ ನೀವು ಸಹಕಾರಿ ಸಂಘಗಳ ಮುಖೇನವೇ

ಪಡಿತರವನ್ನು ಗ್ರಾಮದಲ್ಲಿ ಕೊಡಿ ಎನ್ನುವುದೇ ನಮ್ಮ ವಾದವಾಗಿರುತ್ತದೆ. ಆದರೆ ಆ ವ್ಯವಸ್ಥೆ ನಾವು ನಿರೀಕ್ಷಿಸಿದ ಮಟ್ಟದಲ್ಲಿ ಆಗುತ್ತಿಲ್ಲ. ನಾನು ಮೊನ್ನೆ ಇದೇ ವಿಚಾರದ ಮೇಲೆ ವಿಧಾನಸಭೆಯಲ್ಲಿ ಪ್ರಶ್ನೆಯನ್ನು ಕೇಳಿದ್ದೆ. ಗ್ರಾಮದಲ್ಲಿ ಪಡಿತರ ವ್ಯವಸ್ಥೆ ಸರಿಯಾಗಿ ಏಕೆ ವಿತರಣೆಯಾಗುತ್ತಿಲ್ಲ ಎನ್ನತಕ್ಕಂಥ ಪ್ರಶ್ನೆಯನ್ನು ಕೇಳಿದಾಗ ಉತ್ತರದಲ್ಲಿ ಸುಮಾರು ಇನ್ನೂ ಐದಾರು ಕಡೆಗಳಲ್ಲಿ ಪಡಿತರ ವ್ಯವಸ್ಥೆ ಸರಿಯಾಗಿ ಕೊಡದೇ ಇರತಕ್ಕಂಥ ಪರಿಸ್ಥಿತಿ ಇದೆ ಎಂದಿದ್ದಾರೆ. ಬಹುಶಃ ಅದಕ್ಕೆ ಗ್ರಾಮ ಪಂಚಾಯತಿಯವರಲ್ಲ, ಸೊಸೈಟಿಯವರೂ ಸಹ ಮುಂದೆ ಬರುತ್ತಾರೆ, ಆದರೆ ಗ್ರಾಮ ಪಂಚಾಯತಿಯ ನಿರ್ಣಯದ ಪ್ರಕಾರ ಮತ್ತು ಗ್ರಾಮಸಭೆಗಳ ನಿರ್ಣಯದ ಪ್ರಕಾರ ಈ ಸೌಲಭ್ಯವನ್ನು ಕಲ್ಪಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಮಾನ್ಯ ಸಚಿವರಲ್ಲಿ ನಾನು ಕೇಳುವುದೇನೆಂದರೆ ಈ ಗ್ರಾಮಗಳಲ್ಲಿ ನಿವೇಶನಗಳನ್ನು ಹಂಚಬೇಕಾದರೆ ಯಾವ ರೀತಿಯ ವ್ಯವಸ್ಥೆ ಇದೆ. ಈ ಹಿಂದೆ ಯಾವ ವ್ಯವಸ್ಥೆ ಇತ್ತೆಂದರೆ ಗ್ರಾಮ ಪಂಚಾಯತಿಯವರು ಘೋಷಿಸಿದಂಥ ಸ್ಥಳವನ್ನು ಕಂದಾಯ ಇಲಾಖೆಯವರು ಮಂಜೂರು ಮಾಡಿಕೊಡುತ್ತಿದ್ದರು. ಆದರೆ ಇವೊತ್ತು ಕಂದಾಯ ಇಲಾಖೆಯವರು ಕೊಡತಕ್ಕಂಥ ವ್ಯವಸ್ಥೆಯಿಲ್ಲ, ತಾಲ್ಲೂಕು ಪಂಚಾಯತಿಯವರು ಘೋಷಿಸಿದ ಸ್ಥಳವನ್ನು ಕಂದಾಯ ಇಲಾಖೆಯವರ ಮರ್ಜಿಯ ಮೇಲೆ ಮಂಜೂರಾತಿ ಸಿಕ್ಕಿದ ಮೇಲೆ ಫಲಾನುಭವಿಗಳ ಪಟ್ಟಿನ್ನು ಗ್ರಾಮ ಪಂಚಾಯತಿಯವರು ಕೊಟ್ಟರೆ ಅದನ್ನು ತಾಲ್ಲೂಕು ಪಂಚಾಯತಿಯವರು ವಿತರಣೆ ಮಾಡುತ್ತಿದ್ದರು. ಆದರೆ ಇವೊತ್ತು ತಾಲ್ಲೂಕು ಪಂಚಾಯತಿಯವರು ಈ ನಿವೇಶನವನ್ನು ಗುರುತಿಸಿತಕ್ಕಂಥ ಸಂದರ್ಭದಲ್ಲಿ ಎಲ್ಲಿ ವಿದ್ಯುಚ್ಛಕ್ತಿ ಇದೆ, ಎಲ್ಲಿ ಮನೆಗಳನ್ನು ಕಟ್ಟುವುದಕ್ಕೆ ನಿವೇಶನ ಯೋಗ್ಯವಿದೆ, ಎಲ್ಲಿ ಕುಡಿಯುವ ನೀರಿಗೆ ಅನುಕೂಲವಾಗುತ್ತದೆ, ಎಲ್ಲಿ ಅನುಕೂಲವಾದ ವಾತಾವರಣ ನಿರ್ಮಾಣವಾಗುತ್ತದೆಯೋ ಅಂಥ ಕಡೆಯಲ್ಲಿ ನಿವೇಶನವನ್ನು ಮಂಜೂರು ಮಾಡಬೇಕೇ ಹೊರತು ಅದನ್ನು ಬಿಟ್ಟು ಕೇವಲ ನಿಮ್ಮ ಅಂಕಿ ಅಂಶಗಳಿಗೋಸ್ಕರ ತಾಲ್ಲೂಕು ಪಂಚಾಯತಿ ಇಷ್ಟು ನಿವೇಶನಗಳನ್ನು ಅಳತೆ ಪ್ರಕಾರ ಮಂಜೂರು ಮಾಡಿದೆ ಎನ್ನುವುದಕ್ಕೋಸ್ಕರ ಕೊಡತಕ್ಕಂಥ ಉತ್ತರ ಸಮರ್ಪಕವಲ್ಲ. ಆರೀತಿಯಲ್ಲಿ ಮಂಜೂರು ಮಾಡುವುದು ಸರಿಯಲ್ಲ. ಒಂದು ವೇಳೆ ನಿವೇಶನಗಳನ್ನು ಗುರುತಿಸತಕ್ಕಂಥ ಅಧಿಕಾರವನ್ನು ಗ್ರಾಮ ಪಂಚಾಯತಿಗೆ ಕೊಟ್ಟರೆ ಒಳ್ಳೆಯದೆಂದು ನಾನು ಹೇಳಬಯಸುತ್ತೇನೆ. ಮತ್ತೊಂದು ವಿಚಾರವೇನೆಂದರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಆಗತಕ್ಕಂಥ ಕೊಳವೆ ಬಾವಿಗಳು. ಈಗಾಗಲೇ ನಾನು ಹೇಳಿದೆ, ಕೊಳವೆ ಬಾವಿಗಳನ್ನು ಗುರುತಿಸತಕ್ಕಂಥ ಕೆಲಸವನ್ನು ಗ್ರಾಮ ಪಂಚಾಯಿತಿಯವರು ಎಲ್ಲಿ ಆಗಬೇಕಾಗಿದೆ ಎನ್ನುವ ಬೇಡಿಕೆಯನ್ನು ಇಡುತ್ತಾರೆ. ತಾಲ್ಲೂಕು ಪಂಚಾಯಿತಿಯವರು ಅದನ್ನು ಮಂಜೂರು ಮಾಡುತ್ತಾರೆ. ಜಿಲ್ಲಾ ಪಂಚಾಯಿತಿಯವರು ಮಂಜೂರು ಮಾಡುತ್ತಾರೆ. ಆದರೆ ಬೋರ್‌ವೆಲ್‌ಗಳನ್ನು ತೋಡತಕ್ಕಂಥ, ಕೊಳವೆ ಬಾವಿಗಳನ್ನು ಕೊರೆಯತಕ್ಕಂಥ ಕೆಲಸ ಸಾಮಾನ್ಯವಾಗಿ ರಾತ್ರಿ ನಡೆಯುತ್ತದೆ. ಅವರು ಕೆಲಸ

ಮಾಡುವುದೇ ರಾತ್ರಿ ಹೊತ್ತು. ಹಗಲು ಕೆಲಸ ಮಾಡುವುದಿಲ್ಲ. ಏಕೆಂದರೆ ಬಹಳಷ್ಟು ಅಡೆತಡೆ ಬರುತ್ತದೆ. ಜನ ಅಲ್ಲಿ ತೆಗೆದುಕೊಂಡು ಹೋಗಿ, ಇಲ್ಲಿ ತೆಗೆದುಕೊಂಡು ಹೋಗಿ ಎಂದು ಹೇಳುತ್ತಾರೆಂದು ಇವರು ರಾತ್ರಿ ಹೋಗಿ ತೋಡಿ ಬರುತ್ತಾರೆ. ಸಾಮಾನ್ಯವಾಗಿ ಇವತ್ತು ಕೊಳವೆ ಬಾವಿಗಳನ್ನು ಎಲ್ಲಿ ತೋಡುತ್ತಾರೆ ಎಂದರೆ ಅವರ ಲಾರಿ ಎಲ್ಲಿ ಹೋಗುತ್ತದೆ ಅಲ್ಲಿ ತೋಡುತ್ತಾರೆಯೇ ಹೊರತು ಮನೆ ಇರುವ ಹತ್ತಿರ ತೋಡುವುದಕ್ಕಾಗುವುದಿಲ್ಲ. ಆ ಪರಿಸ್ಥಿತಿಯನ್ನು ಕಾಣುತ್ತಿದ್ದೇವೆ. ಮಾನ್ಯ ಸಚಿವರು ನಮ್ಮ ಜೊತೆ ಬಂದರೆ ತೋರಿಸುತ್ತೇವೆ. ಎಲ್ಲಾ ಪಿ.ಡಬ್ಲ್ಯೂ.ಡಿ ರಸ್ತೆಯ ಪಕ್ಕ ಲಾರಿ ನಿಲ್ಲಿಸಿಕೊಂಡು ತೋಡಿಕೊಂಡು ಹೋಗುತ್ತಾರೆ. ಬಸ್‌ಸ್ಟಾಂಡ್ ಪಕ್ಕ ತೋಡುತ್ತಾರೆ, ದೇವಸ್ಥಾನದ ಹತ್ತಿರ ತೋಡುತ್ತಾರೆ. ಎಲ್ಲೆಂದರೆ ಅಲ್ಲಿ ಅದಕ್ಕೆ ಇತಿಮಿತಿ ಇಲ್ಲ. ಅದಕ್ಕೆ ಪುರಾವೆ ಬೇಕಾದರೆ ತಮಗೆ ತೋರಿಸುತ್ತೇನೆ. ತಾವು ತೋಡುವುದಕ್ಕೆ ಅನುಮತಿಯನ್ನು ಕೊಡುತ್ತೀರಿ. ಮಳೆಗಾಲ ಬರುವಾಗ ತೋಡುವುದಕ್ಕೆ ಪ್ರಾರಂಭ ಮಾಡುತ್ತಾರೆ. ಈ ವ್ಯವಸ್ಥೆ ಇದ್ದು, ಇದಕ್ಕೆ ಹೇಳುವವರು ಕೇಳುವವರು ಯಾರೂ ಇಲ್ಲ. ಇವರು ಮಾಡುವುದೇ ಮರ್ಜಿ, ಇವರು ಕೊಟ್ಟಿದ್ದೇ ಲೆಕ್ಕ. ಈ ವ್ಯವಸ್ಥೆಯಡಿಯಲ್ಲಿ ಇವತ್ತು ಕೊಳವೆ ಬಾವಿಗಳನ್ನು ತೋಡತಕ್ಕಂಥ ಕೆಲಸವಾಗುತ್ತಿದೆ. ಇದನ್ನು ಸರಿಪಡಿಸತಕ್ಕಂಥ, ಇದಕ್ಕೆ ಜವಾಬ್ದಾರಿಯನ್ನು ಮಾಡತಕ್ಕಂಥ ಕೆಲಸವನ್ನು ಆಯಾಯ ಗ್ರಾಮಪಂಚಾಯಿತಿಯ ಕಾರ್ಯದರ್ಶಿಯವರುಗಳ ಮೇಲೆ ಹೇರಬೇಕಾಗುತ್ತದೆ. ಬಹುಶಃ ಅಂತಹ ಜವಾಬ್ದಾರಿ ಹೇರಿದರೆ ಈ ರೀತಿಯ ಅವ್ಯವಸ್ಥೆಗಳಿಗೆ ಅಥವಾ ಬೇಕಾಬಿಟ್ಟಿಯಾಗಿ ತೋಡಿ ಹೋಗತಕ್ಕಂಥ ಕೆಲಸವನ್ನು ಮಾಡುವುದಕ್ಕೆ ಆಗುವುದಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಇನ್ನು ಕುಡಿಯುವ ನೀರಿನ ಯೋಜನೆಯಲ್ಲಿ ಸಾಮಾನ್ಯವಾಗಿ ಮೋಟಾರ್‌ಗಳು ಹಾಳಾಗುವುದು. ಯಾವುದೇ ಕಿರುನೀರು ಯೋಜನೆ ಸರಬರಾಜು ಆಗಲಿ, ಅಥವಾ ನಲ್ಲಿ ನೀರಿನ ಯೋಜನೆಯಾಗಲಿ, ಒಂದು ವರ್ಷದೊಳಗೆ ಮೋಟಾರ್ ಸುಟ್ಟುಹೋಗುವುದನ್ನು ಕಾಣುತ್ತಿದ್ದೇವೆ. ಅದಕ್ಕೆ ಎರಡು ಕಾರಣಗಳಿವೆ. ಒಂದನೇ ಕಾರಣ ಬಹುಶಃ ಅದನ್ನು ಉಪಯೋಗಿಸುವುದಕ್ಕೆ ಅನುಭವ ಇಲ್ಲದೆ ಇರತಕ್ಕಂಥ ಸಿಬ್ಬಂದಿಗಳನ್ನು ಹಾಕಿ ಅವರು ಹ್ಯಾಂಡಲ್ ಮಾಡುತ್ತಿರುವುದರಿಂದ ಹಾಗೂ ಎರಡನೆಯದಾಗಿ ಕಳಪೆ ಮಟ್ಟದ ಪಂಪ್‌ಗಳನ್ನು ಉಪಯೋಗಿಸುತ್ತಿರುವುದರಿಂದ ಪ್ರತಿವರ್ಷ ಕುಡಿಯುವ ನೀರಿನ ಯೋಜನೆ ಬಗ್ಗೆ ತನಿಖೆ ಮಾಡಿದರೆ ಪ್ರತಿ ಯೋಜನೆಯಲ್ಲಿ ಇರತಕ್ಕಂಥ ಪಂಪ್‌ಸೆಟ್‌ಗಳು ಸುಟ್ಟು ಹೋಗಿರತಕ್ಕಂಥಾದ್ದನ್ನು ನಾವು ಕಾಣುತ್ತಿದ್ದೇವೆ. ಅದಕ್ಕೆ ಬದಲಿ ವ್ಯವಸ್ಥೆಯನ್ನು ಮಾಡಬೇಕಾದಂತಹ ಪರಿಸ್ಥಿತಿಯನ್ನು ಮಾಡಬೇಕಾಗುತ್ತದೆ. ಇವುಗಳ ಬಗ್ಗೆ ವಿಶೇಷವಾದ ಗಮನವನ್ನು ಹರಿಸಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇನ್ನು ಮೊನ್ನೆ ಮಾತನಾಡತಕ್ಕಂಥ ಸಂದರ್ಭದಲ್ಲಿ ವಿಶ್ವ ಬ್ಯಾಂಕ್ ಯೋಜನೆ ಬಗ್ಗೆ ನಾವು ನಮ್ಮ ಕಾರ್ಯಕ್ರಮಗಳ ಬಗ್ಗೆ ಹೇಳಿದ್ದೇವೆ. ವಿಶ್ವಬ್ಯಾಂಕ್ ಯೋಜನೆ ಎನ್ನುವುದು ಕಳೆದ ಸಾರಿ ಹೇಳಿದ್ದೇನೆ. ಅದನ್ನು ಪುನಃ ತಮ್ಮ

ನೆನೆಪಿಗೆ ತರುತ್ತಿದ್ದೇನೆ. ವಿಶ್ವಬ್ಯಾಂಕ್ ಯೋಜನೆ ಎನ್ನುವುದು ಒಂದು ಶಾಪ. ನಮಗೆ ಅದು ಬೇಡವೆಂದರೆ ನೀವು ಕೇಳುವುದಿಲ್ಲ. ಇವತ್ತು ನಾವು ಗ್ರಾಮ ಪಂಚಾಯಿತಿ ಸಮಿತಿಯಲ್ಲಿ ನಿರ್ಣಯ ಮಾಡುತ್ತೇವೆ, ತಾಲ್ಲೂಕು ಪಂಚಾಯಿತಿಯ ಸಮಿತಿಯಲ್ಲಿ ನಿರ್ಣಯ ಮಾಡುತ್ತೇವೆ. ಜಿಲ್ಲಾ ಪಂಚಾಯಿತಿ ನಿರ್ಣಯ ಮಾಡುತ್ತೇವೆ. ನಮಗೆ ವಿಶ್ವ ಬ್ಯಾಂಕ್ ಯೋಜನೆ ಬೇಡ, ಬೇರೆ ಯಾವುದಾದರೂ ಯೋಜನೆಯಲ್ಲಿ ಕೊಡಿ ಎಂದು ಹೇಳಿದರೂ ಸಹ ನೀವು ಯಾವುದೋ ಕಾಲದಲ್ಲಿ ಮಂಜೂರು ಮಾಡತಕ್ಕಂಥ ಬಹುಶಃ ನಮ್ಮ ಕಾಲದಲ್ಲಿ ಮಂಜೂರು ಮಾಡಿರತಕ್ಕಂಥ ಕೆಲಸವನ್ನು ಪೆಂಡಿಂಗ್ ಇಡಿಸಿಕೊಂಡಿದ್ದಾರೆ. ಅವು ಇವತ್ತು ಕೆಲಸ ಮಾಡುತ್ತಾ ಇಲ್ಲ. ಇಡೀ ನಮ್ಮ ಕ್ಷೇತ್ರದಲ್ಲಿ ಒಂದು ಪೈಲೆಟ್ ಯೋಜನೆ ಮಾತ್ರ ಕೆಲಸ ಮಾಡುತ್ತಿದೆ. ಮತ್ತು ಯಾವುದೇ ಯೋಜನೆಗಳು ಕೆಲಸವನ್ನು ಮಾಡುತ್ತಾ ಇಲ್ಲ. ಕೆಲವು ಟೆಂಡರ್ ಆಗಿವೆ, ಕೆಲವು ಟೆಂಡರ್ ಆಗಿಲ್ಲ. ಇದರ ಬಗ್ಗೆ ತಾವು ಮೊನ್ನೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಮೇಯಲ್ಲಿ ಪೂರ್ತಿ ಮಾಡುತ್ತೇವೆ ಎಂದು ಭರವಸೆಯನ್ನು ಕೊಟ್ಟಿದ್ದೀರಿ, ಆ ಭರವಸೆಯಲ್ಲಿ ಇದ್ದೇವೆ. ಬಹುಶಃ ಏನಾದರೂ ಸರಿಪಡಿಸುತ್ತೀರಿ ಎನ್ನುವ ಧೈರ್ಯ ಇದೆ. ಆದರೆ ಗ್ರಾಮಾಂತರ ಪ್ರದೇಶದ ಜನರನ್ನು ಎದುರಿಸುವುದಕ್ಕೆ ಬಹಳಷ್ಟು ಕಷ್ಟವಾಗುತ್ತದೆ ಎನ್ನುವ ಮಾತನ್ನು ಹೇಳಿ ಈ ಗ್ರಾಮಪಂಚಾಯಿತಿ ರಸ್ತೆಗಳ ಬಗ್ಗೆ ಹೇಳುವುದಾದರೆ, ಗ್ರಾಮ ಪಂಚಾಯಿತಿಯಲ್ಲಿ ಗ್ರಾಮಪಂಚಾಯಿತಿಗಳು ಮಾಡಿರತಕ್ಕಂತ ರಸ್ತೆಗಳ ಪಟ್ಟಿ ಇರಬೇಕು. ಗ್ರಾಮ ಪಂಚಾಯಿತಿಗಳು ಮಾಡತಕ್ಕಂಥ ಕಾಮಗಾರಿಗಳ ಅಂದಾಜು ಪಟ್ಟಿ ಗ್ರಾಮ ಪಂಚಾಯಿತಿಯಲ್ಲಿ ಇರಬೇಕು. ಆದರೆ ನಾವು ಕಾಣುವುದು, ಯಾವ ರಸ್ತೆ ಎಷ್ಟು ಕೆಲಸ ಮಾಡಿದ್ದಾರೆ? ಅದರ ಅಂದಾಜು ಏನು ಎನ್ನುವಂತಹ ವಿವರ ಅಲ್ಲಿನ ಗ್ರಾಮಪಂಚಾಯಿತಿ ಅಧ್ಯಕ್ಷರಿಗಾಗಲಿ, ಅಲ್ಲಿ ಗ್ರಾಮಪಂಚಾಯಿತಿ ಸದಸ್ಯರಿಗಾಗಲಿ ಅಲ್ಲಿನ ಗ್ರಾಮಪಂಚಾಯಿತಿ ಕಾರ್ಯದರ್ಶಿಗಳಿಗಾಗಲಿ ಇಲ್ಲದೆ ಇರುವುದನ್ನು ಕಾಣುತ್ತಿದ್ದೇವೆ. ಹಾಗಿದ್ದಮೇಲೆ ಎಂ.ಬಿ.ಬುಕ್‌ನಲ್ಲಿ ಎಂಟ್ರಿ ಮಾಡಿದ ತಕ್ಷಣ ಅವರ ಅಂದಾಜು ಪಟ್ಟಿ ತಯಾರಾಗುತ್ತದೆ. ಬಹುಶಃ ಯಾವುದೇ ಕೆಲಸವನ್ನು ಮಾಡತಕ್ಕಂಥ ಸಂದರ್ಭದಲ್ಲಿ ಅಂದಾಜು ಪಟ್ಟಿ ಗ್ರಾಮಪಂಚಾಯಿತಿಯಲ್ಲಿ ಇರಬೇಕು. ಆದರೆ ಗ್ರಾಮಪಂಚಾಯಿತಿಯಲ್ಲಿ ಆಗತಕ್ಕಂಥ ಯಾವುದೇ ಕಾಮಗಾರಿ ಇರಲಿ, ಜಿಲ್ಲಾ ಪಂಚಾಯಿತಿ ಕಾಮಗಾರಿ ಇರಲಿ ತಾಲ್ಲೂಕು ಪಂಚಾಯಿತಿ ಕಾಮಗಾರಿ ಇರಲಿ ಅಥವಾ ಗ್ರಾಮ ಪಂಚಾಯಿತಿ ಮುಖಾಂತರ ಆಗತಕ್ಕಂಥ ಕಾಮಗಾರಿಗಳು ಅಂದಾಜು ಪಟ್ಟಿಯನ್ನು ಆ ಗ್ರಾಮ ಪಂಚಾಯಿತಿಯಲ್ಲಿ ಇಟ್ಟರೆ ನಮ್ಮ ಗ್ರಾಮದಲ್ಲಿ ಏನೇನು ಕೆಲಸವಾಗುತ್ತದೆ ಎನ್ನುವ ವಿಚಾರಗಳು ಈ ಗ್ರಾಮ ಪಂಚಾಯಿತಿ ಸದಸ್ಯರಿಗೆ ಬರುತ್ತದೆ. ಇವತ್ತು ನಾವು ಜಿಲ್ಲಾ ಪಂಚಾಯಿತಿಯಲ್ಲಿ ಒಂದು ನಿರ್ಣಯವನ್ನು ಮಾಡಿದ್ದೇವೆ. ಯಾವುದೇ ಕಾಮಗಾರಿಗಳು ಆಗತಕ್ಕಂಥ ಸಂದರ್ಭದಲ್ಲಿ ಆಯಾಯ ಗ್ರಾಮಪಂಚಾಯಿತಿಯಲ್ಲಿ ಅಂದಾಜು ಪಟ್ಟಿಯನ್ನು ಕೊಡಬೇಕೆನ್ನುವ ನಿರ್ಣಯವನ್ನು ಮಾಡಿದ್ದೇವೆ. ಆ ನಿರ್ಣಯ ಮಾಡಿ ಎರಡು

ವರ್ಷವಾದರೂ ಸಹ ಆ ಅಧಿಕಾರಿಗಳಿಂದ ಆ ಅಂದಾಜು ಪಟ್ಟಿಯನ್ನು ಆಯಾಯ ಗ್ರಾಮಪಂಚಾಯಿತಿಗೆ ಮುಟ್ಟಿಸಲಿಕ್ಕೆ ಆಗಿಲ್ಲ. ನಾನು ನಿಮಗೆ ತೋರಿಸುತ್ತೇನೆ, 2-3 ನಿರ್ಣಯ ಮಾಡಿದ್ದೇವೆ. ಕಿಂಡಿ ಅಣೆಕಟ್ಟು ಬಗ್ಗೆ ಅಂದಾಜು ಪಟ್ಟಿ ಕೊಡಿ, ಶಾಲಾ ಕಟ್ಟಡಗಳ ಬಗ್ಗೆ ಅಂದಾಜು ಪಟ್ಟಿ ಕೊಡಿ, ಏನಾಗುತ್ತದೆ ಎನ್ನುವುದು ಜನರಿಗೆ ಗೊತ್ತಾಗುತ್ತದೆ, ಗ್ರಾಮಪಂಚಾಯಿತಿ ಸದಸ್ಯರಿಗೆ ಗೊತ್ತಾಗಬೇಕು, ಎಷ್ಟು ಕೆಲಸವಾಗುತ್ತದೆ ಎನ್ನುವ ವಿವರ ಗೊತ್ತಿರಬೇಕು, ಅದನ್ನು ಕೊಡಿ ಎಂದು ಕೇಳಿದರೆ ಇವರು ಕೊಡುವುದಿಲ್ಲ. ಬಹುಶಃ ಇವತ್ತು ಜಿಲ್ಲಾ ಪಂಚಾಯತ್ ನಿರ್ಣಯ ಬಂದರೆ ಆಗುವುದಿಲ್ಲ. ತಾಲ್ಲೂಕು ಪಂಚಾಯತ್ ಸಮಿತಿ ನಿರ್ಣಯ ಬಂದರೆ ಆಗುವುದಿಲ್ಲ. ಈ ವ್ಯವಸ್ಥೆಯಡಿಯಲ್ಲಿ ನಾವು ಇದ್ದರೆ ಕೆಲಸವನ್ನು ಎಷ್ಟು ಪ್ರಾಮಾಣಿಕವಾಗಿ ಮಾಡುವುದಕ್ಕಾಗುತ್ತದೆ. ಎಷ್ಟು ಪಾರದರ್ಶಕವಾಗಿ ಇಡುವುದಕ್ಕಾಗುತ್ತದೆ ಎಂಬುದನ್ನು ಚಿಂತನೆ ಮಾಡಬೇಕಾಗುತ್ತದೆ. ಈ ರಸ್ತೆಗಳ ಸುಧಾರಣೆ ಬಗ್ಗೆ ಹೇಳುವುದಾದರೆ ಅವುಗಳನ್ನು ಮಂಜೂರು ಮಾಡತಕ್ಕಂಥ ಸಂದರ್ಭದಲ್ಲಿ ಅವರು ಎಷ್ಟು ಮಾಡುತ್ತಾರೆ, ಎಷ್ಟು ಮಾಡುವುದಿಲ್ಲ ಎನ್ನುವುದು ಅಸಮರ್ಪಕವಾಗಿ ಪೂರ್ಣ ಮಾಡದೇ ಇರತಕ್ಕಂಥಾದ್ದು, ಅರ್ಧ ಮಾಡಿ ನಿಲ್ಲಿಸತಕ್ಕಂಥ ಕೆಲಸವನ್ನು ನಾವು ಕಾಣುತ್ತೇವೆ. ಕೆಲವು ವರ್ಷ ಫಿಲ್ಲರ್ ಆಗಿರುತ್ತವೆ. ಕೆಲವು ವರ್ಷ ಸ್ಲ್ಯಾಬ್ ಮಾಡಿರುತ್ತಾರೆ. ಕೆಲವು ವರ್ಷ ಅದಕ್ಕೆ ಅಪ್ರೋಚ್ ಇರುವುದಿಲ್ಲ. ನಾವು ಅಂತಹ ವ್ಯವಸ್ಥೆಗಳನ್ನು ಕಾಣುತ್ತಿದ್ದೇವೆ. ಅದನ್ನು ನೋಡತಕ್ಕಂಥ ಜನರಿಗೂ ಸಹ ಅಸಹ್ಯವಾಗಿರುತ್ತದೆ. ಒಂದು ಫಿಲ್ಲರ್ ಮಾಡಿ ಮೂರು ವರ್ಷ ಇರತಕ್ಕಂಥಾದ್ದು. ಎರಡು ವರ್ಷ ಇಡುವುದು. ಸ್ಲ್ಯಾಬ್ ಮಾಡಿ ಎರಡು ವರ್ಷಗಳು ಇರತಕ್ಕಂಥ ಒಂದು ಸಂಕಗಳಾಗಿರಲಿ, ರಸ್ತೆಗಳಾಗಿರಲಿ ಮಾಡತಕ್ಕಂಥಾದ್ದು ಸಮಂಜಸವಲ್ಲ. ಅದನ್ನು ಬೇರೆ ಪ್ರಮಾಣದಲ್ಲಿ ಮಾಡತಕ್ಕಂಥ ಕೆಲಸವನ್ನು ಮಾಡಬೇಕಾಗುತ್ತದೆ. ಮತ್ತು ಗ್ರಾಮ ಪಂಚಾಯಿತಿಯ ಮತ್ತೊಂದು ಮೂಲಭೂತ ಬೇಡಿಕೆಗಳು ವಿದ್ಯುಚ್ಛಕ್ತಿ. ಬಹುಶಃ ಬೀದಿ ದೀಪದ ಅತಿ ಅವಶ್ಯಕತೆ ಇದೆ. ಬೀದಿ ದೀಪದಮೇಲೆ ಗ್ರಾಮಪಂಚಾಯಿತಿ ಎಷ್ಟು ಹಿಡಿತ ಇದೆ? ತಾಲ್ಲೂಕು ಪಂಚಾಯಿತಿ ಎಷ್ಟು ಹಿಡಿತ ಇದೆ? ಕೆ.ಇ.ಬಿ. ಇಲಾಖೆ ಮೇಲೆ ಜಿಲ್ಲಾ ಪಂಚಾಯಿತಿಗೆ ಎಷ್ಟು ಹಿಡಿತ ಇದೆ? ಅವರ ಮರ್ಜಿನಲ್ಲಿ ಉಪಚಾರ ಮಾಡಿ ನಾವು ಗ್ರಾಮಪಂಚಾಯಿತಿಗೆ ಕರೆದುಕೊಂಡು ಹೋಗಬೇಕಾಗುತ್ತದೆ. ಗ್ರಾಮಪಂಚಾಯಿತಿಯಲ್ಲಿ ಪ್ರಶ್ನೆ ಕೇಳಿದರೆ ಹೇಳುತ್ತಾರೆ ಅದಕ್ಕೆ ಕಂಬ ಇಲ್ಲ, ವೈರ್ ಇಲ್ಲ ಅದಕ್ಕೆ ಟ್ರಾನ್ಸ್‌ಫಾರ್ಮರ್ ಇಲ್ಲ ಎಂದು ಹೇಳುತ್ತಾರೆ. ಮಾನ್ಯ ಸಚಿವರು ತಪ್ಪು ತಿಳಿದುಕೊಳ್ಳಬೇಡಿ. ಈ ಸಮಸ್ಯೆಗಳು ನಿಮ್ಮ ಕಾಲದಲ್ಲಿ ಮಾತ್ರ ಅಲ್ಲ ಎಲ್ಲಾ ಕಾಲದಲ್ಲಿ ಇದೆ. ಇದನ್ನು ಸರಿಪಡಿಸಬೇಕು, ಹಿಡಿತ ಸಾಧಿಸಬೇಕು. ಈ ದಾರಿದೀಪಗಳ ಅವಶ್ಯಕತೆಗಳನ್ನು ನಾವು ಪೂರೈಸಬೇಕಾಗುತ್ತದೆ. ನಾವು ಕಾಣತಕ್ಕಂಥಾದ್ದು ಏನೆಂದರೆ ಗ್ರಾಮ ಪಂಚಾಯಿತಿಗಳಲ್ಲಿ ಹೋದಾಗ ಲೈಟ್‌ಗಳು ಹಾಳಾಗಿರುವುದನ್ನು ತೆಗೆದಿರುತ್ತಾರೆ. ಅದನ್ನು ರಿಪೇರಿ ಮಾಡುವುದಕ್ಕೆ ಆಗುವುದಿಲ್ಲ. ಅದನ್ನು ರಿಪೇರಿ ಮಾಡಿದರೂ

ಹಾಕುವುದಕ್ಕೆ ಬರುವುದಿಲ್ಲ. ಅಂತಹ ಪರಿಸ್ಥಿತಿಗಳನ್ನು ನಾವು ಗ್ರಾಮಪಂಚಾಯಿತಿಯನ್ನು ಸಂದರ್ಶನ ಮಾಡಿದಾಗ ಕಾಣುತ್ತೇವೆ. ತಾವೂ ಸಹ ಗ್ರಾಮ ಪಂಚಾಯಿತಿ ಸಂದರ್ಶನ ಮಾಡಿದಾಗ ಅಲ್ಲಿ ತೆಗೆದಿರತಕ್ಕಂಥ ಟ್ಯೂಬ್ ಲೈಟ್‌ಗಳನ್ನು ಕಾಣುತ್ತಿರಬಹುದು. ಅದನ್ನು ಕೆ.ಇ.ಬಿ ಮೇಲೆ ಸಂಪೂರ್ಣವಾಗಿ ತಾಲ್ಲೂಕು ಪಂಚಾಯಿತಿ ಸಮಿತಿಯಾಗಲಿ, ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಹಿಡಿತ ಇಲ್ಲ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಮತ್ತೊಂದು ತಾಲ್ಲೂಕು ಪಂಚಾಯಿತಿ ಸಮಿತಿಯಿಂದ ಆಗತಕ್ಕಂಥ ಗ್ರಾಮ ಪಂಚಾಯಿತಿ ಫಲಾನುಭವಿಗಳು. ಇವತ್ತು ನೀವು ನಂಬಲಿಕ್ಕಿಲ್ಲ. ರಾಷ್ಟ್ರೀಯ ಹೆದ್ದಾರಿ ಸುಮಾರು ಒಂದು ಕಿಲೋಮೀಟರ್ ದೂರದಲ್ಲಿ ಇರತಕ್ಕಂಥ ಮನೆಗಳಿಗೆ ಸಹ ಇವತ್ತು ವಿದ್ಯುಚ್ಛಕ್ತಿ ಬೆಳಕನ್ನು ಕೊಡುವುದಕ್ಕೆ ಆಗುತ್ತಿಲ್ಲ. ಕುಂದಾಪುರ ತಾಲ್ಲೂಕು ಕೇಂದ್ರದಿಂದ ಎರಡು ಕಿಲೋಮೀಟರ್ ದೂರದಲ್ಲಿ ಇರುವಂತಹ ನಾವು ವಿದ್ಯುಚ್ಛಕ್ತಿಯನ್ನು ಅಥವಾ ಭಾಗ್ಯಜ್ಯೋತಿಯನ್ನು ಕೊಡದೇ ಇರುವಂತಹ ಪರಿಸ್ಥಿತಿಯಲ್ಲಿ ಇದ್ದೇವೆ. ಏಕೆಂದರೆ ಕಂಬ ಇರುವಲ್ಲಿ ಮನೆ ಇರಬೇಕು. ಬಹಳಷ್ಟು ತಾಂತ್ರಿಕ ತೊಂದರೆಗಳಿಂದ ಈ ರೀತಿಯಾಗುತ್ತದೆ. ಬೇರೆ ಬೇರೆ ಅನುದಾನ ಇರುತ್ತದೆ. ಆ ಅನುದಾನದಿಂದ ಕಂಬ ಇಡಬಹುದು, ಆ ಅನುದಾನದಿಂದ ಲೈಟ್ ಹಾಕಿಸಿಕೊಳ್ಳಬಹುದು. ಆದರೆ ಕೆ.ಇ.ಬಿ.ಯವರ ಮಂದಗಾಮಿ ನೀತಿಯಿಂದ ನಾವು ನಿರೀಕ್ಷಿಸಿದ ಮಟ್ಟದಲ್ಲಿ ಕೆಲಸವನ್ನು ಮಾಡದೇ ಜನರಿಗೆ ಉತ್ತರವನ್ನು ಕೊಡದೇ ಇರತಕ್ಕಂಥ ಪರಿಸ್ಥಿತಿಯನ್ನು ಹೊಂದಿದ್ದೇವೆಂದು ಹೇಳುತ್ತೇನೆ.

5.10 ಪಿಎಂ

ಶ್ರೀ ಯು.ಬಿ.ಬಣಕಾರ್: ಮಾನ್ಯ ಉಪಾಧ್ಯಕ್ಷರೆ, ಹೊಸ ಗ್ರಾಮಗಳಿಗೆ ವಿದ್ಯುತ್ ಸಂಪರ್ಕವನ್ನು ಕೊಡುವುದಕ್ಕೋಸ್ಕರ ಈ ಸದನದಲ್ಲಿ ಪ್ರಸ್ತಾಪವಾದಾಗ ಗ್ರಾಮಪಂಚಾಯತ್‌ನಲ್ಲಿ ಈಗಾಗಲೇ ಅನುದಾನ ಕಡಿಮೆ ಇರುವುದರಿಂದ....

ಉಪಾಧ್ಯಕ್ಷರು: ನೀವು ಕ್ಲಾರಿಫಿಕೇಷನ್ ಕೇಳಿ, ಅದು ಬಿಟ್ಟು ಭಾಷಣವನ್ನು ಮಾಡಿದರೆ ಹೇಗೆ? ನೀವು ಈ ರೀತಿಯಾಗಿ ಮಧ್ಯೆ ಎದ್ದು ಮಾತನಾಡಿದರೆ, ಮಾತನಾಡುವವರು ಹೇಳಬೇಕೆಂದಿರುವುದನ್ನು ಮರೆತು ಬಿಡುತ್ತಾರೆ, ಇದು ಸರಿಯಾಗುವುದಿಲ್ಲ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ: ಮಾನ್ಯ ಉಪಾಧ್ಯಕ್ಷರೆ, ಈ ಗ್ರಾಮ ಪಂಚಾಯತಿಗಳ ಮೂಲಭೂತ ಬೇಡಿಕೆಗಳನ್ನು ಪೂರೈಸಲು ಆಗದೇ ಇರುವಂತಹ ಪರಿಸ್ಥಿತಿಯನ್ನು ತಮ್ಮ ಗಮನಕ್ಕೆ ತರಲಿಚ್ಚಿಸುತ್ತೇನೆ. ಇದು ಏನೂ ಉತ್ಪ್ರೇಕ್ಷೆಯಲ್ಲ, ಸಾಧನೆಯೂ ಅಲ್ಲ, ನೀವು ಮಾಡಬೇಕಾದಂತಹ ಕೆಲಸದಲ್ಲಿ ವಿಫಲವಾಗಿದೆ ಎಂದು ಹೇಳುತ್ತೇನೆ. ಈ ಗ್ರಾಮಪಂಚಾಯತಿಯ ಕೆಲಸಗಳು ಆದರ ಇತಿಮಿತಿಯಲ್ಲೇ ಆಗುವಂಥಾದ್ದು ಇದೆ.

ಏನಾದರೂ ರಿಪೇರಿಯಾಗಬೇಕಾದರೆ ಅದಕ್ಕೆ ತಾಲ್ಲೂಕು ಪಂಚಾಯತಿಯ ಒಪ್ಪಿಗೆ ಬೇಕಾಗಿಲ್ಲ, ಅಥವಾ ಜಿಲ್ಲಾ ಪಂಚಾಯತ್ ಸಮಿತಿಯ ಒಪ್ಪಿಗೆ ಬೇಕಾಗಿಲ್ಲ. ಈ ಗ್ರಾಮ ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಅಭಿವೃದ್ಧಿ ಕೆಲಸದಲ್ಲಿ ಶಾಲೆಗಳ ರಿಪೇರಿಯಾಗಲಿ, ಅಂಗನವಾಡಿ ಕಟ್ಟಡಗಳ ರಿಪೇರಿಯಾಗಲಿ, ಪಂಚಾಯತ್ ಕಟ್ಟಡಗಳ ರಿಪೇರಿಯಾಗಲಿ ಅಥವಾ ಕುಡಿಯುವ ನೀರಿನ ಟ್ಯಾಪ್‌ಗಳ ರಿಪೇರಿ ಕೆಲಸಗಳನ್ನು ಪೂರೈಸಲು ಗ್ರಾಮ ಪಂಚಾಯತ್‌ನವರೆ ತೆಗೆದುಕೊಂಡರೆ ಅದಕ್ಕೆ ಕೊಡುವಂತಹ ಅನುದಾನವನ್ನು ಇವರಿಗೆ ಕೊಟ್ಟರೆ ಅವರು ಈ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಕ್ಕಾಗುತ್ತದೆ. ಅದು ಲೋಕಲ್ ಕಾಂಟ್ರೊಬ್ಯೂಷನ್ ಇರಲಿ ಅಥವಾ ಗ್ರಾಮ ಪಂಚಾಯತ್ ಅನುದಾನದ ಮುಖಾಂತರ ಸೌಲಭ್ಯಗಳನ್ನು ವಿತರಣೆ ಮಾಡುವಂತಹ ಸಂದರ್ಭದಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವಂತಹ ಸಂದರ್ಭದಲ್ಲಿ ಪ್ರತಿ ಪಂಚಾಯತ್‌ಗಳು ನಿರ್ಣಯಗಳ ಮುಖಾಂತರ ಫಲಾನುಭವಿಗಳನ್ನು ಆಯ್ಕೆ ಮಾಡಬೇಕು. ಇಲ್ಲಿ ಏನಾಗುತ್ತದೆಂದರೆ ಅಧ್ಯಕ್ಷರು ಮನೆಯಲ್ಲಿರುತ್ತಾರೆ. ಇಲಾಖೆಯವರು ಅವರ ಹತ್ತಿರ ಪಟ್ಟಿಯನ್ನು ತೆಗೆದುಕೊಂಡು ಹೋಗುತ್ತಾರೆ. ಅವರು ಸಹಿ ಮಾಡಿ ಕೊಡುತ್ತಾರೆ. ಹೀಗಾದರೆ ಇಲ್ಲಿ ಅಂಕಿ ಸಂಖ್ಯೆಗಳು ಸಿಗುವುದಿಲ್ಲ. ಇದರಿಂದ ಯಾರಿಗೆ ಕೊಟ್ಟಿದ್ದಾರೆನ್ನುವ ವಿಳಾಸವೂ ಇರುವುದಿಲ್ಲ. ಇದರಿಂದ ಸೌಲಭ್ಯಗಳು ಮುಟ್ಟಬೇಕಾದಂತಹ ಜನರಿಗೆ ಮುಟ್ಟುತ್ತಿಲ್ಲ. ಆದುದರಿಂದ ಗ್ರಾಮಪಂಚಾಯತ್‌ನ ಮುಖಾಂತರ ಗ್ರಾಮಕ್ಕೆ ಯಾವುದೇ ಸೌಲಭ್ಯಗಳು ಸಿಗುವಂತಹ ಸಂದರ್ಭದಲ್ಲಿ ಆ ಗ್ರಾಮಪಂಚಾಯತ್ ಪುಸ್ತಕದಲ್ಲಿ ನಿರ್ಣಯವಾಗಬೇಕು. ಅದನ್ನು ಮುಂಚೆಯೇ ಕೊಟ್ಟರೆ ಅನಂತರ ನಿರ್ಣಯ ಮಾಡಿಕೊಳ್ಳಬಹುದು. ಈ ರೀತಿ ನಿರ್ಣಯದ ಮುಖಾಂತರ ಕೊಟ್ಟರೆ ಮಾತ್ರ ಅದನ್ನು ಜನರಿಗೆ ಸಮಗ್ರವಾಗಿ ಮುಟ್ಟುವಂತಹ ವ್ಯವಸ್ಥೆಯಾಗುತ್ತದೆ. ಆದರೆ ನಾವು ಎಷ್ಟೇ ಹೇಳಿದರೂ ಕೂಡ ಅದನ್ನು ಮಾಡುವುದಕ್ಕಾಗುತ್ತಿಲ್ಲ. ಇದಕ್ಕೆ ಅಧಿಕಾರಿಗಳು ಸ್ಪಂದಿಸುತ್ತಿಲ್ಲ. ಆ ಜವಾಬ್ದಾರಿಯನ್ನು ಕಾರ್ಯದರ್ಶಿಯವರು ಮಾಡಿದರೆ ಮಾತ್ರ ಈ ಕೆಲಸಗಳನ್ನು ಮಾಡಬಹುದೆನ್ನುವಂತಹ ಮಾತನ್ನು ಹೇಳುತ್ತೇನೆ. ಇನ್ನು ಉಪ ಮುಖ್ಯಮಂತ್ರಿಯವರು ಮಾತನಾಡುವಂತಹ ಸಂದರ್ಭದಲ್ಲಿ ಜನ ಪ್ರತಿನಿಧಿಗಳು ಕಾಮಗಾರಿಗಳನ್ನು ಮಾಡುವುದು ಸರಿಯಲ್ಲವೆಂದು ಹೇಳಿದರು. ನಾವು ಇದನ್ನು ಒಪ್ಪತಕ್ಕಂಥ ವಿಚಾರವಾಗಿದೆ. ಆದರೆ ಇವತ್ತಿನ ಪರಿಸ್ಥಿತಿ ಯಾವ ರೀತಿಯಲ್ಲಿದೆ ಎಂದರೆ ಒಬ್ಬ ಗ್ರಾಮಪಂಚಾಯತ್ ಅಧ್ಯಕ್ಷರು ಅವರೇ ಗುತ್ತಿಗೆ ಕೆಲಸವನ್ನು ಮಾಡಿದಂತಹ ಸಂದರ್ಭದಲ್ಲಿ ಆ ಗ್ರಾಮ ಪಂಚಾಯತ್ ಸದಸ್ಯರು ಎಲ್ಲಾ ಸೇರಿ ಅವರು ಒಂದು ನಿರ್ಣಯವನ್ನು ಮಾಡುತ್ತಾರೆ. ನೀನು ಇನ್ನು ಮುಂದೆ ಗ್ರಾಮಪಂಚಾಯತ್‌ನ ಯಾವುದೇ ಕಾಮಗಾರಿಗಳನ್ನು ಮಾಡಬಾರದೆನ್ನುವಂತಹ ನಿರ್ಣಯವನ್ನು ಮಾಡಿರುವುದನ್ನು ನಾವು ಕಾಣುತ್ತಿದ್ದೇವೆ. ಅಂತಹ ನಿರ್ಣಯವನ್ನು ಮಾಡಿದವರ ಮೇಲೆ ನೀವು ಏನು ಕ್ರಮ ಕೈಗೊಳ್ಳುತ್ತಾ ಇದ್ದೀರಿ. ಇಲ್ಲಿ ಕರಪ್ಷನ್ ಚಾರ್ಜಸ್ ಇದೆ,

ಇದರ ಮೇಲೆ ನಿರ್ಣಯವಾಗುತ್ತದೆ. ಅದರ ಮೇಲೂ ಸಹ ಕ್ರಮವಾಗಿರುವುದನ್ನು ನಾವು ಕಾಣುತ್ತಾ ಇದ್ದೇವೆ. ನಾವು ಇವತ್ತು ಅಧಿಕಾರ ವಿಕೇಂದ್ರೀಕರಣದ ಅಡಿಯಲ್ಲಿದ್ದೇವೆ. ನಮ್ಮ ರಾಜ್ಯದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮೂರು ಲಕ್ಷಕ್ಕೂ ಹೆಚ್ಚು ಜನ ನೌಕರರು ಕೆಲಸ ಮಾಡುತ್ತಿದ್ದಾರೆ. ಈ ವಿಕೇಂದ್ರೀಕರಣ ವ್ಯವಸ್ಥೆ ಪರಿಣಾಮಕಾರಿಯಾಗಿ ಜಿಲ್ಲೆಯ ಎಲ್ಲಾ ಕಡೆಗಳಿಗೆ ಜಾರಿಗೆ ತರಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಕಾಳಜಿ ಹಾಗೂ ಜವಾಬ್ದಾರಿ ಬೇಕಾಗುತ್ತದೆನ್ನುವಂತಹ ಮಾತನ್ನು ಹೇಳುತ್ತೇನೆ. ಅಧಿಕಾರ ವಿಕೇಂದ್ರೀಕರಣದಲ್ಲಿ ನಂಬಿಕೆ ಇಲ್ಲದ ಜನರು ಭ್ರಷ್ಟಾಚಾರದ ವಿಕೇಂದ್ರೀಕರಣವೆನ್ನುವಂತಹ ಮಾತನ್ನು ಹೇಳುತ್ತಿದ್ದಾರೆಂದು ಮಾನ್ಯ ಉಪ ಮುಖ್ಯಮಂತ್ರಿಯವರು ಹೇಳಿದರು. ಇದನ್ನು ತಾವು ಯಾವ ರೀತಿಯಲ್ಲಿ ತಡೆಯುವುದಕ್ಕೆ ಸಾಧ್ಯವಾಗುತ್ತದೆ? ಕಾಯಿದೆಯಿಂದ ತಡೆಯುವುದಕ್ಕೆ ಆಗುತ್ತದೆಯೇ? ಕಾರ್ಯದರ್ಶಿಯವರ ಜವಾಬ್ದಾರಿಯಿಂದ ಇದನ್ನು ತಡೆಯುವುದಕ್ಕೆ ಆಗುತ್ತದೆಯೇ? ಯಾವ ರೀತಿಯಲ್ಲಿ ಜನ ಪ್ರತಿನಿಧಿಗಳು ಗುತ್ತಿಗೆ ಮಾಡುವಂತಹ ಕೆಲಸವನ್ನು ತಡೆಯುವುದಕ್ಕೆ ಸಾಧ್ಯವಾಗುತ್ತದೆನ್ನುವಂತಹ ವಿಚಾರಗಳ ಬಗ್ಗೆ ಚಿಂತನೆ ಮಾಡಿದರೆ ಇದನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆ. ಇವರು ಗುತ್ತಿಗೆ ಕೊಡಬಾರದೆಂದರೆ ಟೆಂಡರ್ ಕರೆಯುವ ಹಾಗೆ ಇಲ್ಲ, ಇಲಾಖೆಯವರು ಮಾಡಬೇಕು. ಜನಪ್ರತಿನಿಧಿಗಳು ಮಾಡಬೇಕೆಂದರೆ ಅವರು ಇವರ ಮೇಲೆ ದೂರು ಹೇಳುವುದಿಲ್ಲ. ಆದುದರಿಂದ ಈ ಒಂದು ಅನೈತಿಕ ಸಂಪರ್ಕದಿಂದ ಇವತ್ತು ಕಾಮಗಾರಿಗಳು ಕಳಪೆಯಾಗುತ್ತಿದೆ. ಇವತ್ತು ಇಂಜಿನಿಯರ್ ಮೇಲೆ ದೂರು ಹೇಳುವುದಕ್ಕೆ ಪಂಚಾಯತ್‌ನವರು ಬರುವುದಿಲ್ಲ. ಈ ರೀತಿಯಾಗಿ ಕಳಪೆ ಕಾಮಗಾರಿಗಳು ಆಗಿರುವಂಥಾದ್ದನ್ನು ನಾವು ಕಾಣುತ್ತಿದ್ದೇವೆ. ಇದನ್ನು ಚುನಾಯಿತ ಪ್ರತಿನಿಧಿಗಳು ಕಾಮಗಾರಿಗಳನ್ನು ಮಾಡುವಂಥಾದ್ದನ್ನು ಕಟ್ಟುನಿಟ್ಟಾಗಿ ನಿಲ್ಲಿಸುವಂತಹ ಕೆಲಸವಾಗಬೇಕಾಗಿದೆ. ಇಲ್ಲಿ ಕೆಲವು ಸಾರಿ ಕಾರ್ಯದರ್ಶಿಯವರು ಗುತ್ತಿಗೆ ಮಾಡುವಂಥಾದ್ದು ಇದೆ. ಕೆಲವು ಕೆಲಸಗಳನ್ನು ಅವರೇ ಮಾಡುತ್ತಾರೆ. ಸಣ್ಣ ಪುಟ್ಟ ಕೆಲಸಗಳನ್ನು ಅಧ್ಯಕ್ಷರು ಅವರಿಗೆ ಕೊಟ್ಟರೆ ಅವರು ಗುತ್ತಿಗೆಗಳನ್ನು ಮಾಡುವುದನ್ನು ನಾವು ಕಾಣುತ್ತಿದ್ದೇವೆ. ಒಂದು ಘಟನೆ ಆಶ್ರಯ ಯೋಜನೆಯಡಿಯಲ್ಲಿ ಒಬ್ಬನಿಗೆ ಮನೆ ಮಾಡಿಕೊಳ್ಳುವಂತಹ ಸಂದರ್ಭದಲ್ಲಿ ಗ್ರಾಮ ಸಭೆಯವರು ಗುರುತಿಸಿಕೊಟ್ಟರು. ಅದನ್ನು ತಾಲ್ಲೂಕು ಪಂಚಾಯತ್‌ನವರು ಮಂಜೂರು ಮಾಡಿದರು. ಅವನಿಗೆ ಮನೆಯನ್ನು ಕಟ್ಟಿಕೊಳ್ಳುವುದಕ್ಕೆ ಆದೇಶವನ್ನು ಮಾಡಿತು. ಆದರೆ ಅವನಿಗೆ ಗಡಿಯನ್ನು ಗುರುತು ಮಾಡಿಕೊಳ್ಳುವುದಕ್ಕೆ ಆಗಲಿಲ್ಲ. ಇದನ್ನು ಅವನು ವಿಳಂಬ ಮಾಡಿದುದರಿಂದ ಅವನ ಮನೆಯನ್ನು ರದ್ದು ಮಾಡಿ ಅದೇ ಗ್ರಾಮ ಪಂಚಾಯತ್‌ನಲ್ಲಿರುವಂತಹ ಸಿಬ್ಬಂದಿಗೆ ಮಂಜೂರು ಮಾಡಿರುವಂಥಾದ್ದನ್ನು ನಾವು ಕಾಣುತ್ತಿದ್ದೇವೆ. ಇವರಿಗೆ ಕೊಡಬಾರದೆಂದು ನನ್ನ ವಾದವಲ್ಲ. ಆದರೆ ಆರ್ಥಿಕವಾಗಿ ಹಿಂದುಳಿದವರಿಗೆ ಗ್ರಾಮ ಸಭೆಯಲ್ಲಿ ನಿರ್ಣಯವಾದಂತಹ ಜನರಿಗೆ ಬಿಟ್ಟು ಇಲ್ಲಿ ಸಿಬ್ಬಂದಿಯವರಿಗೆ ಮನೆಗಳನ್ನು ಹಂಚಿಕೊಡುವಂತಹ ವ್ಯವಸ್ಥೆ ಏನಿದೆ,

ಅವುಗಳ ರೀತಿ ಸರಿಯಾಗಿಲ್ಲ. ಇದರ ಬಗ್ಗೆ ಸಹ ತನಿಖೆಯಾಗಬೇಕೆನ್ನುವಂಥ ಒತ್ತಾಯವನ್ನು ಮಾಡಿದ್ದೇವೆ. ಆದರೆ ಇದು ತನಿಖೆಯಾಗಿಲ್ಲ, ಆ್ಯಕ್ಷನ್ ತೆಗೆದುಕೊಂಡಿಲ್ಲ. ಇದರ ಬಗ್ಗೆ ಏನು ನಡೆಯುತ್ತಿದೆನ್ನುವ ವಿಚಾರವನ್ನು ನಾನು ತಮ್ಮ ಗಮನಕ್ಕೆ ತರಲಿಚ್ಚಿಸುತ್ತೇನೆ. ನನ್ನ ಕ್ಷೇತ್ರದಲ್ಲಿ ಒಂದು ಕಡೆ ಇಂತಹ ಘಟನೆ ನಡೆಯಿತು. ಗ್ರಾಮ ಪಂಚಾಯತ್ ಅಧ್ಯಕ್ಷರು ಕಾರ್ಯದರ್ಶಿಯವರು ಹೋಗಿ ಅಂಗಡಿಗಳಿಗೆ ಪರವಾನಗಿಯನ್ನು ಕೊಡುವುದಿಲ್ಲವೆನ್ನುವಂತಹ ಉದ್ದೇಶವನ್ನು ಇಟ್ಟುಕೊಂಡು ಮೂರು ಅಂಗಡಿಗಳಿಗೆ ಬೀಗ ಹಾಕಿದರು. ಅವರಲ್ಲಿ ಇಬ್ಬರು ಅಸಿಸ್ಟೆಂಟ್ ಕಮೀಷನರ್ ಹತ್ತಿರ ಅಪೀಲ್ ಮಾಡಿದರು. ಆಗ ಅಸಿಸ್ಟೆಂಟ್ ಕಮೀಷನರ್‌ರವರು ಬೀಗವನ್ನು ತೆಗೆಯುವಂತೆ ಹೇಳಿದರು. ಮತ್ತೊಂದು ಇದೇ ರೀತಿಯಲ್ಲಿ ಒಬ್ಬ ಕ್ಷೌರಿಕನು ಬಹಳ ಕಷ್ಟದಲ್ಲಿದ್ದಂಥವರು ಅವರು ಈ ವಿಚಾರವನ್ನು ಪ್ರಸ್ತಾಪ ಮಾಡಿದರು. ನಾನು ಈ ವಿಷಯವನ್ನು ಜಿಲ್ಲಾ ಪಂಚಾಯತ್‌ನ ಅಧ್ಯಕ್ಷರಲ್ಲಿ ಕೇಳಿದೆ. ಈ ರೀತಿ ಯಾವುದೇ ಅಂಗಡಿಗಳಿಗೆ ಲೈಸನ್ಸ್ ಇರಲಿ, ಇಲ್ಲದಿರಲಿ ಬೀಗ ಹಾಕುವಂತಹ ಅಧಿಕಾರ ಗ್ರಾಮ ಪಂಚಾಯತ್‌ನವರಿಗೆ ಇದೆಯೆ? ಬೀಗ ಹಾಕುವಂತಹ ಅಧಿಕಾರ ಗ್ರಾಮ ಪಂಚಾಯತ್‌ನವರಿಗೆ ಇಲ್ಲವೆನ್ನುವಂತಹ ವಿಚಾರವನ್ನು ಕಾರ್ಯ ನಿರ್ವಾಹಣಾ ಅಧಿಕಾರಿಗಳು ಹೇಳಿದರು. ಇದನ್ನು ಅಧ್ಯಕ್ಷರು ಹೇಳಿದರಾದರೂ ಸಹ ದ್ವೇಷವನ್ನು ಸಾಧಿಸುವ ದಿಸೆಯಲ್ಲಿ ಅಂಗಡಿಗಳಿಗೆ ಬೀಗ ಹಾಕುವಂತಹ ಕೆಲಸಗಳಿಗೆ ಇವತ್ತಿನ ಗ್ರಾಮ ಪಂಚಾಯತ್ ಕಾರ್ಯದರ್ಶಿಯವರು ಹೋಗುತ್ತಿದ್ದಾರೆಂದರೆ ಬಹುಶಃ ಇದರಿಂದ ಜನರ ಮೇಲೆ ಓಡಿತವನ್ನು ಸಾಧಿಸುತ್ತಿದ್ದಾರೆಯೇ ಹೊರತು ನಮ್ಮ ಗ್ರಾಮ ಪಂಚಾಯತ್‌ನ ಅಭಿವೃದ್ಧಿ ದಿಶೆಯಲ್ಲಿ ಕೆಲಸ ಮಾಡುತ್ತಿಲ್ಲವೆನ್ನುವಂಥಾದ್ದನ್ನು ನಾವು ಕಾಣುತ್ತಿದ್ದೇವೆ. ಈ ವಿಚಾರಗಳ ಬಗ್ಗೆ ಜಿಲ್ಲಾ ಪಂಚಾಯತ್‌ಗಳಲ್ಲಿ ಚರ್ಚೆಯಾಯಿತು. ಈ ವಿಚಾರವಾಗಿ ಅಧ್ಯಕ್ಷರು, ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಹೇಳಿದರು ಈ ರೀತಿ ಮಾಡುವುದು ತಪ್ಪಾಗುತ್ತದೆ, ಕಾನೂನು ಬಾಹಿರವಾಗುತ್ತದೆ, ಬೀಗವನ್ನು ತೆಗೆಸಿ ಎಂದು ಹೇಳಿದರು. ಅದಕ್ಕೆ ಕಾರ್ಯನಿರ್ವಹಣಾಧಿಕಾರಿಗಳು ನನಗೆ ಲಿಖಿತ ಮೂಲಕ ಬೇಕೆಂದು ಹೇಳಿದರು. ಅವರು ನಿಮ್ಮ ಪಕ್ಷದವರೇ ಆಗಿದ್ದಾರೆ. ಜಿಲ್ಲಾ ಪಂಚಾಯತ್ ಅಧ್ಯಕ್ಷರು ಲಿಖಿತ ಮೂಲಕ ಕೊಡಬೇಕು, ಇದು ಕಾನೂನು ಬಾಹಿರವಾಗಿ ಮಾಡಿದಂತೆ ಆಗುತ್ತದೆ ಬೀಗ ತೆಗೆಸಿ ಎಂದು. ನಾವು ಇವತ್ತು ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಮಾತನಾಡುತ್ತೇವೆ. ಜನರ ಕೈಗೆ ಅಧಿಕಾರವನ್ನು ಕೊಡಬೇಕೆಂದು ಮಾತನಾಡುತ್ತಿದ್ದೇವೆ. ಆದರೆ ಕ್ರಮ ಬಾಹಿರವಾಗಿ ಮಾಡಿರುವಂತಹ ಕೆಲಸಗಳು ಅಂದರೆ ಬೀಗ ಹಾಕಿರುವಂಥಾದ್ದು ಸರಿಯಲ್ಲ. ಇಲ್ಲಿ ಒಬ್ಬ ಅಧ್ಯಕ್ಷರು ಹೇಳಿದರೂ ಕೇಳದಿರುವಂತಹ ಪರಿಸ್ಥಿತಿಯಡಿಯಲ್ಲಿರುವುದಾದರೆ ಈ ಅಧಿಕಾರ ವಿಕೇಂದ್ರೀಕರಣಕ್ಕೆ ಎಷ್ಟು ಅರ್ಥ ಬರುತ್ತದೆ? ಇವತ್ತು ಅಧಿಕಾರ ವಿಕೇಂದ್ರೀಕರಣದಲ್ಲಿ ಗ್ರಾಮಪಂಚಾಯತ್ ಅಧ್ಯಕ್ಷರು ಕಡತಗಳು ಬೇಕೆಂದು ಹೇಳಿದರೆ ಅದನ್ನು ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಯವರಿಂದ ತರಿಸಬೇಕು. ಎಲ್ಲಾ ಕಡತಗಳು ಅವರಿಗೆ ಬರದೇ

ಇರುವಂಥಾದ್ದನ್ನು ನಾವು ಕಾಣುತ್ತಿದ್ದೇವೆ. ಅದಕ್ಕೆ ಸರಿಯಾದಂತಹ ಮಾರ್ಗದರ್ಶನವಿಲ್ಲದೆ ಒಂದೊಂದು ಕಡೆ ಒಂದೊಂದು ರೀತಿಯ ಇಂಪ್ಲಿಮೆಂಟ್ ಮಾಡುತ್ತಿದ್ದಾರೆ. ಆದುದರಿಂದ ಈ ವ್ಯವಸ್ಥೆಗಳು ಸರಿಯಾಗಿ ಆಗಬೇಕೆನ್ನುವಂಥ ಮಾತನ್ನು ಹೇಳುತ್ತೇನೆ.

(ಈ ಹಂತದಲ್ಲಿ ಛೇರ್ಮನ್‌ರಾದ (ಶ್ರೀ ಶರಣಪ್ಪ ಅಡ್ಡೊಕೇಟ್‌ರವರು) ಪೀಠವನ್ನಲಂಕರಿಸಿದರು)

ಮಾನ್ಯ ಛೇರ್ಮನ್‌ರವರೆ, ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳಡಿ ನಮ್ಮ ಗ್ರಾಮದಲ್ಲಿ ಎಷ್ಟು ಫಲಾನುಭವಿಗಳಿಗೆ ಏನೆಲ್ಲಾ ಸೌಲಭ್ಯಗಳು ಸಿಕ್ಕಿವೆ, ಯಾವ್ಯಾವ ಕುಟುಂಬಗಳಿಗೆ ಎಷ್ಟೆಷ್ಟು ಸೌಲಭ್ಯಗಳು, ಸಿಕ್ಕಿವೆ ಎಂಬ ವಿವರಗಳು ಪ್ರತಿ ತಾಲ್ಲೂಕಿನಲ್ಲೂ ಇರಬೇಕು. ಕಳೆದ 10- 15 ವರ್ಷಗಳಿಂದ ಸತತವಾಗಿ ಪ್ರಯೋಜನ ಪಡೆದಿರುವ ಫಲಾನುಭವಿಗಳೇ ಪುನಃ ಪಡೆದುಕೊಳ್ಳುತ್ತಿದ್ದಾರೆ, ಹಳ್ಳಿಯಲ್ಲಿರುವ ಮುಗ್ಧರು ಹಾಗೇ ಇರುತ್ತಾರೆ, ಅವರಿಗೆ ಯಾವುದೇ ಪ್ರಯೋಜನ ಸಿಕ್ಕುವುದಿಲ್ಲ. ಆದುದರಿಂದ, ಈ ದಿಸೆಯಲ್ಲಿ ಪರಿಶಿಷ್ಟ ಜಾತಿ ವರ್ಗಕ್ಕೆ ಸೇರಿದವರು ಯಾರ್ಯಾರು ಯಾವ್ಯಾವ ಸೌಲಭ್ಯಗಳನ್ನು ಪಡೆದಿದ್ದಾರೆಂಬುದರ ಬಗ್ಗೆ ಸಂಪೂರ್ಣ ವಿವರಗಳನ್ನು ನೀಡುವ ಕಂಪ್ಯೂಟರ್ ವ್ಯವಸ್ಥೆಯನ್ನು ತಾಲ್ಲೂಕು ಮಟ್ಟದಲ್ಲಿ ಅಳವಡಿಸಬೇಕು. ಒಂದು ಕಂಪ್ಯೂಟರ್‌ಗೆ ಐವತ್ತು ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಕಂಪ್ಯೂಟರ್ ಪಡೆದಲ್ಲಿ ಆಯಾ ತಾಲ್ಲೂಕು ಪಂಚಾಯಿತಿಗಳಲ್ಲಿ ಕಳೆದ ಹತ್ತು ವರ್ಷಗಳಿಂದ ಯಾರ್ಯಾರು ಯಾವ್ಯಾವ ಪ್ರಯೋಜನವನ್ನು ಸರ್ಕಾರದಿಂದ ಪಡೆದುಕೊಂಡಿದ್ದಾರೆನ್ನುವ ವಿವರ ಸಿಗುತ್ತದೆ. ಅಲ್ಲದೆ, ಪ್ರಯೋಜನ ಪಡೆದವರೇ ಮತ್ತೊಮ್ಮೆ ಪಡೆಯುವುದಕ್ಕಾಗದೆ ಸರ್ಕಾರದ ಸೌಲಭ್ಯಗಳಿಂದ ವಂಚಿತವಾದ ವರ್ಗ ಯಾವುದಿದೆ, ಅವರಿಗೆ ಸಿಗುವಂತಾಗುತ್ತದೆ, ಇದರಿಂದ ಹಣವೂ ದುರುಪಯೋಗವಾಗುವುದಿಲ್ಲವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದರ ಬಗ್ಗೆ ಈಗಾಗಲೇ ನಾವು ಬಹಳಷ್ಟು ಸಲ ಚರ್ಚಿಸಿದ್ದೇವೆ. ಸರ್ಕಾರದಿಂದ ಯಾವುದೇ ಸೌಲಭ್ಯಗಳು ಬಂದರೂ ಸಿಕ್ಕಿದವರಿಗೇ ಸಿಗುತ್ತಿದೆ. ಈ ವ್ಯವಸ್ಥೆಯನ್ನು ತೆಗೆದುಹಾಕಿ ಕಂಪ್ಯೂಟರ್ ಮುಖಾಂತರ ವ್ಯವಸ್ಥೆ ತರುವುದು ಒಳ್ಳೆಯದೆಂದು ತಿಳಿಸಬಯಸುತ್ತೇನೆ.

ಶ್ರೀ ಎಚ್.ಡಿ.ಬಸವರಾಜು (ವಿರಾಜಪೇಟೆ): ಮಾನ್ಯ ಛೇರ್ಮನ್‌ರವರೆ, ಮಾನ್ಯ ಸದಸ್ಯರಾದ ಪ್ರತಾಪ ಚಂದ್ರಶೆಟ್ಟಿಯವರು ಮಾತನಾಡುತ್ತಾ ಯಾವ್ಯಾವ ಫಲಾನುಭವಿಗಳು ಸರ್ಕಾರದ ಪ್ರಯೋಜನ ಪಡೆದುಕೊಂಡಿದ್ದಾರೋ ಆ ಕುರಿತ ಮಾಹಿತಿಯನ್ನು ಸಂಗ್ರಹಿಲು ಕಂಪ್ಯೂಟರ್ ವ್ಯವಸ್ಥೆ ಅಳವಡಿಸಿಕೊಳ್ಳಬೇಕೆಂದು ಸೂಚಿಸಿದ್ದಾರೆ. ಇದರ ಬಗ್ಗೆ ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಒಂದು ಸಲಹೆ ಕೊಡಲು ಇಚ್ಛಿಸುತ್ತಿದ್ದೇನೆ. ಕಾರಣವೇನೆಂದರೆ, ಸರ್ಕಾರದ ಯೋಜನೆಯ

ಸೌಲಭ್ಯಗಳನ್ನು ಪಡೆದಂಥ ಫಲಾನುಭವಿಗಳೇ ಮತ್ತೊಮ್ಮೆ ಪಡೆಯುತ್ತಿದ್ದಾರೆ. ಇದನ್ನು ತಪ್ಪಿಸಬೇಕೆಂದರೆ, ಪ್ರತಿ ಸಾರಿಯೂ ಅವರು ಸರ್ಕಾರದ ಯಾವುದಾದರೂ ಯೋಜನೆಯಡಿ ಸಹಾಯ ಪಡೆದುಕೊಳ್ಳಬೇಕೆಂದಿದ್ದರೆ ಅರ್ಜಿದಾರರ ಭಾವಚಿತ್ರ ಲಗತ್ತಿಸಬೇಕೆಂದು ಒತ್ತಾಯ ಮಾಡಿದರೆ ಪದೇ ಪದೇ ಒಂದೇ ಕುಟುಂಬದವರು ಸರ್ಕಾರದ ಸೌಲಭ್ಯ ಪಡೆಯುವುದನ್ನು ತಪ್ಪಿಸಲು ಸಾಧ್ಯವಾಗುತ್ತದಾದ್ದರಿಂದ ಇದರ ಬಗ್ಗೆ ಮಂತ್ರಿಗಳು ಗಹನವಾಗಿ ಆಲೋಚಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ: ಮತ್ತೊಂದು ವಿಚಾರವೇನೆಂದರೆ, ಯಾವುದೇ ಇಲಾಖೆಯ ಯಾವುದೇ ಕಾರ್ಯಕ್ರಮಗಳನ್ನು ತೆಗೆದುಕೊಂಡರೂ ಸಾಧನೆಯ ಪಟ್ಟಿ ನಮ್ಮ ಹತ್ತಿರ ಇದೆ. ಏನೆಂದರೆ, ಆಶ್ರಯ ಮನೆಗಳ ನಿರ್ಮಾಣದಲ್ಲಿ ಅವ್ಯವಹಾರ, ಡಾ:ಅಂಬೇಡ್ಕರ್ ವಸತಿ ನಿರ್ಮಾಣ ಯೋಜನೆಯಲ್ಲಿ ಅವ್ಯವಹಾರ, ನೆರಳಿನ ಭಾಗ್ಯ ಯೋಜನೆಯಲ್ಲಿ ಅವ್ಯವಹಾರ, ನಿವೇಶನ ಹಂಚಿಕೆಯಲ್ಲಿ ಅವ್ಯವಹಾರ, ದಶಲಕ್ಷ ಬಾವಿ ಯೋಜನೆಯ ವಿತರಣೆಯಲ್ಲಿ ಅವ್ಯವಹಾರ, ಶಾಲಾ-ಕಟ್ಟಡಗಳ ಕಾಮಗಾರಿಯಲ್ಲಿ ಅವ್ಯವಹಾರ, ಶಾಲಾ-ಕಟ್ಟಡಗಳಿಗಾಗಿ ಉಪಯೋಗಿಸಲ್ಪಟ್ಟ ನಾಟಾ ಪ್ರಕರಣದಲ್ಲಿ ಅವ್ಯವಹಾರ, ಹೀಗೆ ಎಲ್ಲಾ ಅವ್ಯವಹಾರಗಳ ಸಾಧನೆಯ ಪಟ್ಟಿ ನೋಡಿದರೆ ಬಹುಶಃ ಈ ಎಲ್ಲಾ ವ್ಯವಸ್ಥೆಗಳಡಿಯಲ್ಲೂ ನಾವು ಇದ್ದೇವೆ. ಈ ಅವ್ಯವಹಾರಗಳನ್ನು ತನಿಖೆ ಮಾಡಬೇಕಾದವರು ಯಾರು? ತನಿಖೆ ನಿರೀಕ್ಷಿಸಿದ ಮಟ್ಟದಲ್ಲಿ ನಡೆಯುತ್ತಿಲ್ಲ, ತನಿಖೆ ಆದಷ್ಟು ಬೇಗ ನಡೆಯಬೇಕು ಮತ್ತು ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಬೇಕು. ಆದರೆ, ಈ ಕುರಿತಂತೆ ನನಗೊಂದು ಭೀತಿ ಇದೆ. ಏನೆಂದರೆ, ಇವರೆಲ್ಲರ ಮೇಲೆ ಕ್ರಮ ಕೈಗೊಂಡರೆ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯದರ್ಶಿಯವರು ಮತ್ತು ಅಧಿಕಾರಿಗಳು ಸಿಗುವುದಿಲ್ಲ. ಇದನ್ನು ನೀವು ಒಪ್ಪುವುದಿಲ್ಲವೆಂದು ನನಗೆ ಗೊತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ನಾವಿದ್ದೇವೆ, ಇರುವುದರಲ್ಲೇ ತೂರಿಕೊಂಡು ಹೋಗುವ ವ್ಯವಸ್ಥೆಯಡಿಗೆ ನಾವು ಬರುತ್ತಿದ್ದೇವೆ. ಇನ್ನೊಂದು ನಾವು ಕಾಣುತ್ತಿರುವಂಥ ಚಿತ್ರ ಏನೆಂದರೆ, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಸರ್ಕಾರದ ಮಟ್ಟದಲ್ಲಿ ನೇಮಕಾತಿಗಳಾಗುತ್ತಿವೆ. ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳ ಸಿಬ್ಬಂದಿಗಳ ನೇಮಕಾತಿ ವಿಷಯದಲ್ಲಿ ಇಷ್ಟು ವರ್ಷಗಳಾದರೂ ಸಹ ಒಂದು ನೀತಿಯನ್ನು ನಾವು ರೂಪಿಸಲಿಲ್ಲ. ನೀತಿಯನ್ನು ರೂಪಿಸಿದಲ್ಲಿ ಕಳೆದ ಹತ್ತು ವರ್ಷಗಳಿಂದ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯದರ್ಶಿ, ಟೆಂಡರ್ ಅಥವಾ ಬೇರೆ ಬೇರೆ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಅನುಕೂಲವುಂಟಾಗುತ್ತದೆ. ಮತ್ತು ಅವುಗಳು ವ್ಯವಸ್ಥಿತವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ಐ.ಆರ್.ಡಿ.ಪಿ. ಬಗ್ಗೆ ಸಂಕ್ಷಿಪ್ತವಾಗಿ ಹೇಳಬಯಸುವುದೇನೆಂದರೆ, ಸದರಿ ಯೋಜನೆಯಡಿ ಫಲಾನುಭವಿಗಳನ್ನು ಬಡತನ ರೇಖೆಯಿಂದ ಯಾವ ರೀತಿಯಲ್ಲಿ ಮೇಲೆತ್ತಬೇಕೆನ್ನುವುದರ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಬಡವರನ್ನು

ಮೇಲೆತ್ತಬೇಕೆಂಬ ಬಗ್ಗೆ ನಿಮಗೂ ಮತ್ತು ನಿಮ್ಮ ಸರ್ಕಾರಕ್ಕೂ ಮನಸ್ಸಿದೆ. ಆದರೆ, ಅವರುಗಳನ್ನು ಬಡತನದ ರೇಖೆಯಿಂದ ಮೇಲಕ್ಕೆತ್ತುವುದು ಹೇಗೆ? ಇವೊತ್ತು ನೀವು ಯಾರ ಮರ್ಜಿನಲ್ಲಿದ್ದೀರಿ? ಬ್ಯಾಂಕ್‌ನವರು ಸಾಲ ಕೊಟ್ಟರೆ ಬಡತನದ ರೇಖೆಯಿಂದ ಮೇಲೆತ್ತುತ್ತೇವೆ. ಇವೊತ್ತು ಬ್ಯಾಂಕಿನವರ ಮರ್ಜಿಯಲ್ಲಿ ನಾವಿದ್ದೇವೆ. ಬಹಳಷ್ಟು ಗ್ರಾಮ ಪಂಚಾಯಿತಿಗಳಲಿ ಬ್ಯಾಂಕ್‌ನವರು ಸಾಲ ಕೊಡುತ್ತಿಲ್ಲ, ಸೊಸೈಟಿಗಳವರೂ ಸಹ ಸಾಲ ಕೊಡಲು ಮುಂದೆ ಬರುತ್ತಿಲ್ಲ. ಇದರ ಬಗ್ಗೆ ತಾವು ಒಂದು ಕಟ್ಟುನಿಟ್ಟಿನ ಆದೇಶ ಕೊಡಬೇಕು. ಏನೆಂದರೆ, ಒಂದು, ಬ್ಯಾಂಕ್‌ನವರು ಸಾಲ ಕೊಡಬೇಕು. ಇಲ್ಲದಿದ್ದರೆ, ಸರ್ಕಾರ ಸೊಸೈಟಿಗಳ ಮುಖಾಂತರ ಐ.ಆರ್.ಡಿ.ಪಿ. ಯೋಜನೆಯಡಿ ಫಲಾನುಭವಿಗಳಿಗೆ ಸಾಲ ನೀಡುವುದಕ್ಕೆಂದು ಗ್ರಾಮ ಸಭೆ ಯಾರ್ಯಾರನ್ನು ಗುರ್ತಿಸಿದೆಯೋ ಅವರಿಗೆ ಸದರಿ ಸೌಲಭ್ಯ ಕೊಡುವ ಕೆಲಸ ಮಾಡಬೇಕಾಗುತ್ತದೆ. ಯಾರು ಪಡೆದುಕೊಂಡ ಸಾಲವನ್ನು ವಾಪಸ್ಸು ಮಾಡುತ್ತಿದ್ದಾರೋ ಅಂತಹವರಿಗೇ ಸಾಲ ಪುನಃ ಕೊಡುತ್ತಾರೆಯೇ ಹೊರತು ಬ್ಯಾಂಕ್‌ನವರ ಮರ್ಜಿಯಲ್ಲಿದ್ದುಕೊಂಡು ಬಡತನದ ರೇಖೆಯಲ್ಲಿರುವವರನ್ನು ಮೇಲಕ್ಕೆತ್ತುವುದಕ್ಕಾಗುವುದಿಲ್ಲವೆಂಬ ಮಾತನ್ನು ಹೇಳಬಯಸುತ್ತೇನೆ. ಅದೇ ರೀತಿ ನಿರ್ಗತಿಕರು ಮತ್ತು ಅತಿ ಕಡು ಬಡವರಿದ್ದಾರೆ. ಇವೆಲ್ಲವೂ ನಮ್ಮ ಅಂಕಿ-ಸಂಖ್ಯೆಗಳ ದೊಂಬರಾಟ. ಇಷ್ಟು ಕೆಲಸಗಳನ್ನು ಮಾಡಿದ್ದೇವೆಂದು ನಾವು ನಮ್ಮ ಸಾಧನೆಗಳ ಪಟ್ಟಿ ತಯಾರಿಸುತ್ತೇವೆ. ತಾವು ವಾರ್ಷಿಕ ವರದಿಯನ್ನು ಕೊಡುವ ಸಂದರ್ಭದಲ್ಲಿ ಅದರಲ್ಲಿ ಮೌಲ್ಯಮಾಪನ ಮಾಡಿ, ಇಷ್ಟು ಜನರಿಗೆ ಸಾಲ ಸೌಲಭ್ಯ ನೀಡಿ ಅವರುಗಳನ್ನು ಮೇಲೆತ್ತಿದ್ದೇವೆ ಎಂಬುದರ ವಿವರಗಳಿರಬೇಕು. ತಾವು ಕೊಡುವ ಸಾಲ ಅದೇ ಉದ್ದೇಶಕ್ಕೆ ಬಳಕೆಯಾಗಿದೆ, ಅದೇ ಉದ್ದೇಶದಿಂದ ಆರ್ಥಿಕವಾಗಿ ಸ್ವಾವಲಂಬಿಗಳಾಗಿದ್ದಾರೆ ಮುಂತಾದ ಯಾವುದೇ ಗುರಿ, ವಿಚಾರಗಳು ಇದರಲ್ಲಿಲ್ಲ. ಇದರ ಬಗ್ಗೆ ಮೌಲ್ಯ ಮಾಪನ ಮಾಡಿದರೆ ಮಾತ್ರ ಚರ್ಚೆಯಾಗಬೇಕಾಗುತ್ತದೆ. ಗ್ರಾಮ ಪಂಚಾಯಿತಿಯಿಂದಿಡಿದು ತಾಲ್ಲೂಕು, ಜಿಲ್ಲಾ ಪಂಚಾಯಿತಿ ಮಟ್ಟದವರೆಗೆ ಈ ಒಂದು ಮೌಲ್ಯಮಾಪನದ ಆಧಾರದ ಮೇಲೆ ಚರ್ಚೆ ಮಾಡಿದರೆ ಗೊತ್ತಾಗುತ್ತದೆ. ಇವೊತ್ತು ಗ್ರಾಮ ಪಂಚಾಯಿತಿಯವರಿಗೆ ಎಷ್ಟು ದಾಕ್ಷಿಣ್ಯವಿರುತ್ತದೆಂದರೆ ಇವರು ಹೇಳಿದವರಿಗೆ ಬ್ಯಾಂಕ್‌ನವರು ಸಾಲ ಕೊಟ್ಟರೆ ಸಾಕು, ಬಡವರಿಗೆ ಸಾಲ ಕೊಡಬಾರದೆಂದೇನೂ ಇಲ್ಲ. ಇಂತಹ ಮರ್ಜಿಯಲ್ಲಿರುವುದರಿಂದ ಬಹುಶಃ ನಾವು ನಿರೀಕ್ಷಿತ ಮಟ್ಟದಲ್ಲಿ ಪ್ರಯೋಜನ ಪಡೆಯುವುದಕ್ಕಾಗುತ್ತಿಲ್ಲ. ಮತ್ತೊಂದು 'ಟೈಸೆಮ್' ಕಾರ್ಯಕ್ರಮದಲ್ಲೂ ಸಹ ನಿರೀಕ್ಷಿತ ಮಟ್ಟದಲ್ಲಿ ನಾವು ಪ್ರಯೋಜನ ಪಡೆಯುತ್ತಿಲ್ಲ. ನೀವು ರೂ. 300, 500, 800 ಗಳಂತೆ ನಷ್ಟ ಪರಿಹಾರ ಕೊಡುತ್ತೀರಿ. ಆದರೆ, ಅದರ ಪ್ರಯೋಜನ ಪಡೆದು ಎಷ್ಟು ಜನರು ಸ್ವಾವಲಂಭಿಗಳಾಗಿದ್ದಾರೆ? ಇದು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಕಾರ್ಯಕ್ರಮವಾಗಿದ್ದು ಅದು ನಡೆದುಕೊಂಡು ಹೋಗಲಿ ಎನ್ನುವ ಉದ್ದೇಶ ಇಟ್ಟುಕೊಳ್ಳಬಹುದೇ ಹೊರತು ಇದರ ಸಾಧನೆ ಏನು? ಇದರ ಮೌಲ್ಯಮಾಪನ ಏನು?

ಇದರಿಂದ ನಾವು ಎಷ್ಟು ಜನರನ್ನು ಬಡತನದ ರೇಖೆಯಿಂದ ಮೇಲೆತ್ತಿದ್ದೇವೆ ಮುಂತಾದ ವಿಚಾರಗಳ ಬಗ್ಗೆ ಚರ್ಚೆ ಮಾಡಿದರೆ ಬಹುಶಃ ಎದೆ ತಟ್ಟಿ ಹೇಳುವುದಕ್ಕೆ ಯಾರಿಗೂ ಧೈರ್ಯ ಬರುವುದಿಲ್ಲ. ಇದು ನಮ್ಮ ಘೋಷಣೆಗಳು, ಕಾರ್ಯಕ್ರಮಗಳು! ಇದನ್ನು ನಾವು ಚುನಾವಣಾ ಪ್ರಚಾರಕ್ಕೆ ಉಪಯೋಗಿಸಿಕೊಳ್ಳಬಹುದೇ ಹೊರತು ವಸ್ತುಸ್ಥಿತಿಯಲ್ಲಿ ನಾವು ಆ ಹಂತಕ್ಕೆ ತಲುಪಿದ್ದೇವೆ ಎಂದು ಹೇಳುವುದಕ್ಕಾಗುವುದಿಲ್ಲ. 'ದ್ವಾಕ್ರಾ' ಯೋಜನೆಯಲ್ಲೂ ಅದೇ ರೀತಿಯಾಗಿದೆ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ.ಮಾಮನಿಯವರು) ಪೀಠವನ್ನಲಂಕರಿಸಿದರು)

ಮಾನ್ಯ ಉಪಾಧ್ಯಕ್ಷರೆ, ಜೀತ ವಿಮುಕ್ತಿ ಪುನರ್ವಸತಿ ಕಾರ್ಯಕ್ರಮವಿದ್ದು ಇದಕ್ಕೆ ಕೇಂದ್ರ ಸರ್ಕಾರದಿಂದ ಅನುದಾನ ಬರುತ್ತದೆ. 1976ರಿಂದ ಹಿಡಿದು ಇಲ್ಲಿಯ ತನಕ ನಮ್ಮ ಸಾಧನೆಗಳೇನು? ಇಲ್ಲಿಯವರೆಗೆ ನಾವು ಅವರಿಗೆ ಸತತವಾಗಿ ಆರ್ಥಿಕ ಚೈತನ್ಯ ಕೊಟ್ಟರೂ ಸಹ ಅವರುಗಳನ್ನು ಸ್ವಾವಲಂಬಿಗಳನ್ನಾಗಿ ಮಾಡುವುದಕ್ಕೆ ಆಗದಿರುವಂಥ ಪರಿಸ್ಥಿತಿಯುಂಟಾಗಿದೆ. ಇದರಲ್ಲಿ ನಾವು ಯಾವ ರೀತಿಯ ಬದಲಾವಣೆ ಕಾಣಬೇಕಾಗಿದೆ? ಯಾವ ರೀತಿ ನಾವು ಅದನ್ನು ಸರಿಪಡಿಸಬೇಕಾಗಿದೆ? ನಾವು 1998ರ ಹೊಸ್ತಿಲಲ್ಲಿದ್ದೇವೆ. ಇಷ್ಟು ವರ್ಷಗಳಿಂದ ಅವರುಗಳನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡಿರುವುದರ ಬಗ್ಗೆ ನಾವು ಚಿಂತಿಸಬೇಕು. ಈ ಕುರಿತು ಒಂದು ಉದಾಹರಣೆ ಕೊಡುವುದಾದರೆ, ನಮ್ಮ ಪರಿಸರದಲ್ಲಿ 8-10 ಕುಟುಂಬಗಳಿದ್ದು ಅವರುಗಳು ಪ್ರತಿ ದಿವಸ ಬೆಳಿಗ್ಗೆ ಎದ್ದು ಕಾಡಿಗೆ ಹೋಗಿ ಕಟ್ಟಿಗೆ ತೆಗೆದುಕೊಂಡು ಬಂದು ಮಾರಾಟ ಮಾಡುತ್ತಾರೆ. ಸರ್ಕಾರ ಕೊಡುವ ಸೌಲಭ್ಯ ಅವರಿಗೆ ಮೇಲು ಖರ್ಚಿಗೆ ಆಗುತ್ತದೆಯೇ ಹೊರತು ಮತ್ತೇನೂ ಉತ್ಪತ್ತಿ ಬರುವುದಿಲ್ಲ. ಅವರಿಗೆ ಉತ್ಪತ್ತಿ ಬರುವ ಕೆಲಸ ಮಾಡಬೇಕೆನ್ನುವ ಮಾತನ್ನು ಹೇಳುತ್ತಾ ತಾವು ಗ್ರಾಮೀಣ ಗುಂಪು ಜೀವವಿಮಾ ಯೋಜನೆಯನ್ನು ಜಾರಿಗೆ ತಂದಿದ್ದೀರಿ. ಸದರಿ ಯೋಜನೆಯ ಜವಾಬ್ದಾರಿಯನ್ನು ಎಲ್ಲಾ ಗ್ರಾಮ ಪಂಚಾಯಿತಿಗಳ ಕಾರ್ಯದರ್ಶಿಯವರಿಗೆ ಕೊಟ್ಟರೆ ಇದರ ಸಾಧನೆಗಳನ್ನು ನಾವು ನಿರೀಕ್ಷಿತ ಮಟ್ಟದಲ್ಲಿ ಮುಟ್ಟುವುದಕ್ಕಾಗುತ್ತದೆ. ಇದು ಪ್ರಚಾರಕ್ಕೋಸ್ಕರ ಮಾತ್ರ ಆಗಿರದೆ ಆರ್ಥಿಕವಾಗಿ ಹಿಂದುಳಿದಿರುವಂಥ ಜನರ ಆರ್ಥಿಕ ಪರಿಸ್ಥಿತಿಯನ್ನು ಮೇಲೆಕ್ಕೆತ್ತುವ ಕಾರ್ಯಕ್ರಮವಾಗಬೇಕು. ಇದರೊಂದಿಗೆ ಗ್ರಾಮ ಸೇವಕರನ್ನು ಉಪಯೋಗಿಸುತ್ತೇವೆ ಎನ್ನತಕ್ಕಂಥ ಅಭಿಪ್ರಾಯವನ್ನು ಸೂಚಿಸಿದ್ದೀರಿ. ಇದು ಒಂದು ಒಳ್ಳೆಯ ಕಾರ್ಯಕ್ರಮ, ಇದು ಅನುಷ್ಠಾನವಾಗಬೇಕಾಗಿದೆ. ದಶಲಕ್ಷ ಬಾವಿ ಎನ್ನತಕ್ಕಂಥ ಯೋಜನೆ ಇದೆ. ಇದರಲ್ಲಿ ಪರಿಶಿಷ್ಟ ಬುಡಕಟ್ಟುಗಳಿಗೆ ಸೇರಿದ ಬಡ ಸಣ್ಣ ಹಾಗೂ ಅತಿ ಸಣ್ಣ ರೈತರಿಗೆ ಮತ್ತು ಜೀತ ವಿಮುಕ್ತ ಕಾರ್ಮಿಕರಿಗೆ ಈ ದಶಲಕ್ಷ ಬಾವಿ ಯೋಜನೆಯನ್ನು ಕೊಡುತ್ತಿದ್ದೀರಿ. ಆದರೆ ದಶಲಕ್ಷ ಬಾವಿ ಕೊಡಬೇಕಾದರೆ ಎರಡು ಎಕರೆ ಭೂಮಿ ಇರಬೇಕು. ಆಗ ಈ ವ್ಯಾಖ್ಯಾನ ಎಲ್ಲಿ ಹೋಗುತ್ತದೆ? ನಾವು

ವರದಿಯನ್ನು ತಯಾರು ಮಾಡತಕ್ಕಂಥ ಸಂದರ್ಭದಲ್ಲಿ ಅದು ಪ್ರಾಕ್ಟಿಕಲ್ ಆಗಿದ್ದರೆ ಒಳ್ಳೆಯದು. ಬಹುಶಃ ಇದನ್ನು ನಾವು ಪೂರ್ಣ ಪ್ರಮಾಣದಲ್ಲಿ ಸಾಧನೆಯನ್ನು ಮಾಡಬೇಕಾದರೆ, ಮುಟ್ಟಿಸಬೇಕಾದಂಥ ಜನರಿಗೆ ಮುಟ್ಟಿಸಬೇಕಾದರೆ, ಯಾವ ಒಂದು ಹಿನ್ನಲೆಯಲ್ಲಿ ಈ ದಶಲಕ್ಷ ಬಾವಿ ಯೋಜನೆಯನ್ನು ಮಾಡುತ್ತಿದ್ದೇವೆ ಅದು ಕಾರ್ಯಗತವಾಗಬೇಕಾದರೆ, ಅತಿ ಬಡವರಿಗೆ ಅಥವಾ ಅತಿ ಸಣ್ಣ ರೈತರಿಗೆ ಭೂಮಿಯನ್ನು ಕೊಡುವುದರೊಂದಿಗೆ, ಭೂಮಿಯನ್ನು ಹಂಚುವುದರೊಂದಿಗೆ ಈ ದಶಲಕ್ಷ ಬಾವಿಯನ್ನು ಕೊಟ್ಟರೆ ಬಹಳಷ್ಟು ಅರ್ಥ ಬರುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಅದೇ ರೀತಿ, ಇಂದಿರಾ ಆವಾಸ್ ಮನೆಗಳ ಬಗ್ಗೆ ಮಾತನಾಡತಕ್ಕಂಥ ಸಂದರ್ಭದಲ್ಲಿ, ಯಾವ ಗ್ರಾಮೀಣ ಜನರು ನಿವೇಶನ ಹೊಂದಿರುವುದಿಲ್ಲ ಅಂಥವರಿಗೆ ಇಂದಿರಾ ಆವಾಸ್ ಯೋಜನೆಯಲ್ಲಿ ಮನೆಗಳನ್ನು ಕೊಡುತ್ತೇವೆ ಎಂದು ಹೇಳುತ್ತೀರಿ. ನಿಮ್ಮ ವರದಿಯಲ್ಲಿ ನೀವು ಕೊಡುತ್ತೇವೆ ಎಂದು ಹೇಳುತ್ತೀರಿ, ಆದರೆ ಅಧಿಕಾರಿಗಳು ಅದನ್ನು ಕೊಡುವುದಿಲ್ಲ. ಹೇಗೆ ಕೊಡಲು ಆಗುತ್ತದೆ ಎಂದು ಕೇಳುತ್ತಾರೆ. ಆರ್.ಟಿ.ಸಿ.ಯಲ್ಲಿ ಸರ್ಕಾರಿ ಎಂದು ಇದ್ದರೂ ಸಹ ಕೊಡುತ್ತಿಲ್ಲ. ನಮ್ಮ ವರದಿ ಒಂದು ಹೇಳುತ್ತದೆ, ನಮ್ಮ ಕಾರ್ಯಕ್ರಮ ಘೋಷಣೆ ಇನ್ನೊಂದು ಆಗುತ್ತದೆ, ಆದರೆ ಕಾರ್ಯಕ್ರಮಗಳು ಮತ್ತೊಂದು ಆಗುತ್ತವೆ. ಇವುಗಳೆಲ್ಲಾ ಕೇವಲ ಪೇಪರ್‌ನಲ್ಲಿ ಮಾತ್ರ ಸಾಧನೆಗಳು ಆಗಬಾರದು. ಇಂದಿರಾ ಆವಾಸ್ ಯೋಜನೆ ಮುಖಾಂತರ, ಯಾರು ನಿವೇಶನ ರಹಿತರಿದ್ದಾರೆ ಅವರಿಗೆ ಮನೆಯನ್ನು ಕಟ್ಟಿಸಿ ಕೊಡತಕ್ಕಂಥ ಕೆಲಸ ಆಗಬೇಕಾಗಿದೆ ಎನ್ನುವಂತ ಮಾತನ್ನು ಹೇಳುತ್ತೇನೆ. ಇದು ಪರಿಣಾಮಕಾರಿಯಾಗಬೇಕಾದರೆ ಗ್ರಾಮಸಭೆಗಳಲ್ಲಿ ಇವರನ್ನು ಆಯ್ಕೆ ಮಾಡತಕ್ಕಂಥಾದ್ದು ಒಂದು ಒಳ್ಳೆಯ ಕಾರ್ಯಕ್ರಮ. ಇನ್ನು, ಗ್ರಾಮೀಣ ಇಂಧನ ಕಾರ್ಯಕ್ರಮ. ಇದು ನಮ್ಮ ಸಾಧನೆಗಳ ಪಟ್ಟಿಯಲ್ಲಿ ಸೇರಿಬಿಟ್ಟಿದೆ. ಸೌರಶಕ್ತಿಯಿಂದ ನೀರು ಕಾಯಿಸುವುದು, ಸೌರ ಶಕ್ತಿಯ ಕುಕ್ಕರ್, ಸೌರಶಕ್ತಿಯ ಬೀದಿ ದೀಪಗಳು, ಸೌರಶಕ್ತಿಯ ನೀರೆತ್ತುವ ಪಂಪು ಇವೆ ಎಂದು ಹೇಳಿದ್ದೀರಿ. ನಮ್ಮ ಶಾಸಕರ ಭವನದಲ್ಲಿ ಇಂಥ ಒಂದು ಸೌರಶಕ್ತಿಯ ಸಾಧನವಿದ್ದು, ಅದು ಏನಾಗಿದೆ? ಇಲ್ಲಿರುವಂಥ ಇದನ್ನೇ ಸರಿ ಮಾಡಲು ಆಗಿದಿರುವಂಥ ನೀವು ಅಲ್ಲಿ ಇದನ್ನು ಮಾಡಿ ಕುಡಿಯುವ ನೀರು, ನೀರೆತ್ತುವ ಪಂಪು, ದಾರಿ ದೀಪಗಳನ್ನು ಕೊಡುತ್ತೇವೆ ಎನ್ನುವುದು ಬಹಳ ವಿಪರ್ಯಾಸ. ವಿಧಾನಸೌಧದಿಂದ 200 ಮೀಟರ್ ದೂರದಲ್ಲಿರತಕ್ಕಂಥ ಶಾಸಕರ ಭವನದಲ್ಲಿ ಅದು ಸರಿಯಾಗಿಲ್ಲ. ವರ್ಷಗಟ್ಟಲೆಯಾದರೂ ಅದು ಸರಿಯಾಗಿಲ್ಲ. ನಾನು ಅದನ್ನೇ ಹೇಳಿದ್ದು, ಇವೆಲ್ಲಾ ನಮ್ಮ ಸಾಧನೆಗಳ ಪಟ್ಟಿಗೆ ಸೇರುತ್ತವೆಯೇ ಹೊರತು, ಘೋಷಣೆಗಳು ಆಗುತ್ತವೆಯೇ ಹೊರತು ಕಾರ್ಯಕ್ರಮವಾಗುವುದಿಲ್ಲ. ಆದರೆ ಇವತ್ತು ಇದು ಅತಿ ಅವಶ್ಯಕವಾಗಿದೆ. ಏಕೆಂದರೆ ಕಟ್ಟಿಗೆಯ ಅವಶ್ಯಕತೆ ಇದೆ. ಕಟ್ಟಿಗೆ ಇಂಧನದ ಅವಶ್ಯಕತೆ ಇದೆ. ಅದಕ್ಕಾಗಿ ಕಾಡು ಕಡಿಯುತ್ತಾರೆ ಅಥವಾ ಇಂಥವುಗಳನ್ನು ಉಪಯೋಗಿಸಬೇಕಾಗುತ್ತದೆ. ಮತ್ತೊಂದು ವಿಷಯ ಇದರಲ್ಲಿ ಇದೆ. ಅದು

ಸುಧಾರಿತ ಒಲೆಗಳು. ಇವು ಎಲ್ಲಿ ಸಿಗುತ್ತವೆ? ಗ್ರಾಮ ಪಂಚಾಯಿತಿಗೆ ಯಾವಾಗ ಬರುತ್ತದೆ ಎಂದು ಕಾಯುತ್ತಾ ಕುಳಿತುಕೊಳ್ಳಬೇಕೇ ಅಥವಾ ತಾಲ್ಲೂಕು ಪಂಚಾಯಿತಿಯಲ್ಲಿ ಯಾವಾಗ ಸಿಗುತ್ತದೆ ಎಂದು ಕಾಯುತ್ತಾ ಕುಳಿತುಕೊಳ್ಳಬೇಕೇ? ಹೀಗೆ ಯಾವುದಾದರೂ ಬದಲಿ ವ್ಯವಸ್ಥೆ ಮಾಡಬೇಕಾದಂಥ ಸಂದರ್ಭದಲ್ಲಿ ಅವನಿಗೆ ಬೇಕಾದಾಗ ಅದನ್ನು ಖರೀದಿಸಲು ಅಥವಾ ಉಚಿತವಾಗಿ ಅಥವಾ ಸಬ್ಸಿಡಿ ದರದಲ್ಲಿ ಸಿಗುವಂಥ ಸಂದರ್ಭದಲ್ಲಿ ಮಾತ್ರ ಅದು ಪ್ರಯೋಜನವಾಗುತ್ತದೆ. ನೀವು ಯಾವಾಗ ಕೊಡುತ್ತೀರಿ ಎಂದು ಕಾಯುತ್ತಾ ಕುಳಿತುಕೊಳ್ಳುವಂಥಾದ್ದು ಸರಿಯಲ್ಲ. ಇವತ್ತು ಯಾರು ಮನೆ ಕಟ್ಟುತ್ತಾರೋ ಆಗ ಈ ಸುಧಾರಿತ ಒಲೆಗಳು ಇದ್ದರೆ ಅದನ್ನು ಉಪಯೋಗಿಸಿ ಕಟ್ಟುತ್ತಾರೆ. ಹೊಸ ಮನೆಗಳನ್ನು ಕಟ್ಟಿಸತಕ್ಕಂಥ ಸಂದರ್ಭದಲ್ಲಿ ಅವುಗಳ ಅವಶ್ಯಕತೆ ಇದ್ದು ಆಗ ಈ ಸುಧಾರಿತ ಒಲೆಗಳಿದ್ದರೆ ಅದರ ಪ್ರಯೋಜನವಾಗುತ್ತದೆ. ಬಹುಶಃ ಇವತ್ತು ಕಾಡು ನಾಶವಾಗಲು ಈ ಬದಲಿ ಇಂಧನದ ವ್ಯವಸ್ಥೆಯನ್ನು ಸಮರ್ಪಕವಾಗಿ ಪೂರೈಕೆ ಮಾಡಿದಿರುವುದೇ ಕಾರಣ. ಇದರಿಂದಾಗಿ ಕಾಡುಗಳು ನಾಶಾವಾಗುತ್ತಿವೆ. ಆದರೆ ಇದನ್ನು ಅರಣ್ಯ ಇಲಾಖೆ ಒಪ್ಪಿಲ್ಲ. ಏಕೆ ಒಪ್ಪುತ್ತಿಲ್ಲ? ನನ್ನನ್ನು ಕೇಳಿದರೆ ಸರಿಯಾಗಿ ಉತ್ತರವನ್ನು ಕೊಡುತ್ತೇನೆ. ಉದಾಹರಣೆಗೆ ದಕ್ಷಿಣ ಕನ್ನಡ ಜಿಲ್ಲೆಯನ್ನು ತೆಗೆದುಕೊಳ್ಳೋಣ. ಅಲ್ಲಿ ಮಲೆನಾಡು ಇದೆ, ಬಹಳಷ್ಟು ಕಾಡುಗಳಿವೆ. ಆದರೆ ಆ ಪರಿಸರದಲ್ಲಿರತಕ್ಕಂಥ ಎಲ್ಲಾ ಜನರು ಕಟ್ಟಿಗೆಯನ್ನು ಉಪಯೋಗಿಸುತ್ತಾರೆ. ಅವರಿಗೆ ಕಟ್ಟಿಗೆ ಎಲ್ಲಿಂದ ಬರುತ್ತದೆ. ಅಲ್ಲಿ ಒಲೆಗಳು ಇಲ್ಲ. ಇಂಥ ಯಾವುದೇ ಬದಲಿ ವ್ಯವಸ್ಥೆಗಳು ಇಲ್ಲದಿರುವುದರಿಂದ ಕಟ್ಟಿಗೆಯನ್ನು ಉಪಯೋಗಿಸಲೇಬೇಕಾಗುತ್ತದೆ. ಈ ಕಟ್ಟಿಗೆಯನ್ನು ಡಿಪೋಗಳಲ್ಲಿ ಕೊಡಬೇಕು, ಇಲ್ಲದಿದ್ದರೆ ಬದಲಿ ವ್ಯವಸ್ಥೆಯನ್ನು ಮಾಡಬೇಕು. ಇಲ್ಲದಿದ್ದರೆ ಸಾಮಾಜಿಕ ಅರಣ್ಯಗಳು ಉಳಿಯುವುದಿಲ್ಲ. ಕೆಲವು ವರ್ಷಗಳಲ್ಲಿ ಅವು ಖಾಲಿಯಾಗುತ್ತವೆ. ಇವತ್ತು ಈ ರೀತಿಯಿಂದ ವ್ಯವಸ್ಥಿತವಾಗಿ ಕಟ್ಟಿಗೆಗಳಿಗಾಗಿ ಕಾಡುಗಳು ಕಾಣೆಯಾಗತಕ್ಕಂಥ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಇದನ್ನು ನೀವು ಒಪ್ಪಿಕೊಳ್ಳಲೇಬೇಕಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಗ್ರಾಮೀಣ ನೈರ್ಮಲ್ಯದ ಬಗ್ಗೆ ಹೇಳುವುದಾದರೆ ಇದು ಒಂದು ಒಳ್ಳೆಯ ಕಾರ್ಯಕ್ರಮ. ಇದನ್ನು ಅನುಷ್ಠಾನ ಮಾಡಬೇಕಾದಂಥ ಸಂದರ್ಭದಲ್ಲಿ ಯಾರು ಉತ್ಸುಕತೆಯಿಂದ ಗ್ರಾಮ ಪಂಚಾಯಿತಿಗಳಲ್ಲಿ ಮುಂದೆ ಬರುತ್ತಾರೆ, ಯಾರಿಗೆ ಅವಶ್ಯಕತೆ ಇದೆ ಅವರೆಲ್ಲರಿಗೂ ಸಿಗುವಂತಾಗಬೇಕು. ಯಾರಿಗೆ ಅವಶ್ಯಕತೆ ಇದೆ, ಯಾರು ಕಟ್ಟುತ್ತಿದ್ದಾರೆ, ಅವರಿಗೆಲ್ಲಾ ಕೊಡತಕ್ಕಂಥ ಕೆಲಸವನ್ನು ಮಾಡಿದರೆ ಬಹಳಷ್ಟು ಅರ್ಥ ಬರುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಸಮಸ್ಯೆಗಳನ್ನು ನಾನು ತಮ್ಮ ಗಮನಕ್ಕೆ ತರಲು ಇಚ್ಛಿಪಡುತ್ತೇನೆ. ಆಶ್ರಯ ಯೋಜನೆಯ ಮನೆಗಳ ಹಣವನ್ನು ಪಾವತಿ ಮಾಡಲು ಮೇಲ್‌ರುಜುವಿಗಾಗಿ ಜಿಲ್ಲಾ ಪಂಚಾಯಿತಿಗಳಿಗೆ ಹೋಗಬೇಕಾಗಿದೆ. ಮುಂಚೆ ತಾಲ್ಲೂಕು ಪಂಚಾಯಿತಿಯಲ್ಲಿ ಮೇಲ್‌ರುಜುವಾಗಿ ಹಣವನ್ನು ಪಾವತಿ

ಮಾಡುತ್ತಿದ್ದರು. ಆದರೆ ಇವತ್ತು ಜಿಲ್ಲಾ ಪಂಚಾಯಿತಿಗೆ ಹೋಗಬೇಕಾಗುತ್ತದೆ. ಅಂದರೆ ಜಿಲ್ಲಾ ಪಂಚಾಯಿತಿಗೆ ಸಮಸ್ಯೆ ಇಲ್ಲವೇ? ಅಲ್ಲಿ ಸಮಸ್ಯೆ ಇಲ್ಲವೆಂದು ಕಾಣುತ್ತದೆ. ನನಗೆ ತಿಳಿದಂಥ ಮಾಹಿತಿ ಪ್ರಕಾರ ಆಶ್ರಯ ಮನೆಗಳಿಗೆ ಹಣವನ್ನು ಪಾವತಿ ಮಾಡತಕ್ಕಂಥ ಸಂದರ್ಭದಲ್ಲಿ ಮೇಲ್‌ರುಜುವಿಗಾಗಿ ಜಿಲ್ಲಾ ಪಂಚಾಯಿತಿಗೆ ಹೋಗಬೇಕಾಗಿದೆ. ಮುಂಚೆ ಇದು ತಾಲ್ಲೂಕು ಪಂಚಾಯಿತಿಯಲ್ಲಿ ವಿತರಣೆಯಾಗುತ್ತಿತ್ತು. ನಾವು ಆಶ್ರಯ ಮನೆಗಳಿಗೆ ಮೂರು ಹಂತಗಳಲ್ಲಿ ಹಣವನ್ನು ಕೊಡುತ್ತೇವೆ. ಮೊದಲನೆಯದಾಗಿ ಫೌಂಡೇಷನ್ ಆದಾಗ ಕೊಡುತ್ತೇವೆ, ಎರಡನೆಯ ಸಲ ಗೋಡೆ ಹಾಕಿದಾಗ ಕೊಡುತ್ತೇವೆ, ಮೂರನೆಯ ಸಲ ಮಾಳಿಗೆ ಹೆಂಚು ಹಾಕಿದಾಗ ಕೊಡುತ್ತೇವೆ. ಈ ಸಂದರ್ಭದಲ್ಲಿ ಮೇಲ್‌ರುಜುವಿಗೋಸ್ಕರ ಜಿಲ್ಲಾ ಪಂಚಾಯಿತಿಗೆ ಹೋಗಬೇಕೆಂದರೆ ಜನಸಾಮಾನ್ಯರಿಗೆ ಬಹಳಷ್ಟು ಕಷ್ಟವಾಗುತ್ತದೆ. ಅದರಲ್ಲೂ ಆರ್ಥಿಕವಾಗಿ ಹಿಂದುಳಿದಂಥವರಿಗೆ ಬಸ್ ಟಿಕೆಟ್ಟಿಗೂ ಸಹ ಹಣವಿಲ್ಲದೇ ಕಷ್ಟವಾಗಿರುವಂಥ ಜನರು ಇದರಿಂದ ಎಷ್ಟು ಅಲೆಯಬೇಕಾಗುತ್ತದೆ, ಎಷ್ಟು ತಿರುಗಬೇಕಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ಬದಲಾಗಿ ಈ ರೀತಿ ಆರ್ಥಿಕವಾಗಿ ಹಿಂದುಳಿದಿರತಕ್ಕಂಥ ಜನರಿಗೆ ಈ ಹಣ, ತಾಲ್ಲೂಕು ಪಂಚಾಯಿತಿಯಲ್ಲೇ ಮೇಲ್‌ರುಜುವಾಗಿ ತಾಲ್ಲೂಕು ಪಂಚಾಯಿತಿಯ ಸಮಿತಿಯಲ್ಲೇ ವಿತರಣೆ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೊಂದು ವಿಷಯವೆಂದರೆ, ಹೊಸ ಜಿಲ್ಲೆಗಳಲ್ಲಿ ಜಿಲ್ಲಾ ಪಂಚಾಯಿತಿಗಳಿವೆ. ಅಲ್ಲಿ ಅನ್‌ಸ್ಪೆಂಟ್ ಹಣ ತುಂಬ ಇದೆ. ಅದನ್ನು ತಾವು ಯಾವ ರೀತಿಯಲ್ಲಿ ವಿಂಗಡನೆ ಮಾಡುತ್ತೀರಿ? ಅದನ್ನು ಹಂಚತಕ್ಕಂಥ ಸಂದರ್ಭದಲ್ಲಿ ಎಲ್ಲಾ ಜಿಲ್ಲಾ ಪಂಚಾಯಿತಿಗಳಿಗೆ ಅಥವಾ ಎರಡು ಜಿಲ್ಲಾ ಪಂಚಾಯಿತಿಗಳಿಗೆ ಸಮನಾಗಿ ಹಂಚಬೇಕು ಅಥವಾ ತಾವು ಯಾವ ಆಧಾರದಲ್ಲಿ ಹಂಚುತ್ತೀರಿ ಎನ್ನುವುದನ್ನು ತಿಳಿಸಿದರೆ ಒಳ್ಳೆಯದಾಗುತ್ತದೆ. ಅದೇ ರೀತಿ ನಮ್ಮ ತಾಲ್ಲೂಕು ಪಂಚಾಯಿತಿ ಸಮಿತಿಗೆ ಹೆಡ್ ಆಫ್ ಅಕೌಂಟ್ ಅನ್ನು ಛೇಂಜ್ ಮಾಡುತ್ತೇವೆ ಎನ್ನುವ ವಿಚಾರವನ್ನು ಹೇಳಿದ್ದೀರಿ. ಅದನ್ನು ಮಾಡಬೇಕಾಗಿದೆ. ಅದೇ ರೀತಿ, ತಾಲ್ಲೂಕು ಪಂಚಯಿತಿಯಲ್ಲಿ ಖರ್ಚಾಗತಕ್ಕಂಥ ಸ್ಟ್ಯಾಂಪ್ ಡ್ಯೂಟಿಗೆ ತಮ್ಮ ನಿರ್ದೇಶನ ಏನಿದೆ, ಯಾವ ಉದ್ದೇಶಕ್ಕಾಗಿ ಖರ್ಚು ಮಾಡಬೇಕು ಎನ್ನುವ ನಿರ್ದೇಶನವಿದ್ದರೆ ಅದನ್ನು ಹೇಳಬೇಕು ಎನ್ನುವ ಮಾತನ್ನು ಹೇಳುತ್ತೇನೆ.

5.40 ಪಿಎಂ

ಈ ಜಿಲ್ಲಾ ಪಂಚಾಯಿತಿಯಲ್ಲಿ ಒಂದು ಖರೀದಿ ಸಮಿತಿ ಇದೆ. ಈ ಖರೀದಿ ಸಮಿತಿ ಇದ್ದಮೇಲೂ ಸಹಿತ ಕೆ.ಎಸ್.ಐ.ಎಂ.ಸಿ. ಮತ್ತು ಟಿ.ಎಸ್.ಎಂ.ಎಸ್. ಇದರಿಂದ ಏಕೆ ಖರೀದಿ ಮಾಡುತ್ತೀರಿ? ಈ ಸಂಸ್ಥೆ ಏಕೆ? ನನ್ನ ನೇರವಾದ ಆಪಾದನೆ ಎಂದು ಹೇಳಿದರೆ ಅಕ್ರಮವನ್ನು ಸಕ್ರಮ ಮಾಡುವ ಸಮಿತಿಗಳಿವು. ಇದರಲ್ಲಿ ತೆಗೆದುಕೊಂಡರೆ ಏನೇ

ಅಕ್ರಮ ಇದ್ದರೂ ಸಕ್ರಮವಾಗಿಬಿಡುತ್ತದೆ. ಏಕೆಂದರೆ ಸರ್ಕಾರಿ ಸಂಸ್ಥೆ. ಸರ್ಕಾರ ಸ್ವಾಮ್ಯದ ಸಂಸ್ಥೆ. ಇಲ್ಲಿ ಅವ್ಯವಹಾರವಾಗುವುದಿಲ್ಲ ಎನ್ನುವ ಭಾವನೆಗಳು ಜನಸಾಮಾನ್ಯರಲ್ಲಿ ಮೂಡುತ್ತದೆ. ಆದರೆ ನಾನು ಹೇಳುವುದು ಬಹುಶಃ ಜನಪ್ರತಿನಿಧಿಗಳಿಗೆ ಜವಾಬ್ದಾರಿ ಇರುತ್ತದೆ. ಅಧಿಕಾರಿಗಳಿಗೂ ಜವಾಬ್ದಾರಿ ಇರುತ್ತದೆ. ಖರೀದಿ ಸಮಿತಿ ಇದೆ. ಯಾವುದು ಯೋಗ್ಯ, ಯಾವುದು ಸರಿಯಾಗಿದೆ ಎನ್ನುವುದನ್ನು ಖರೀದಿ ಮಾಡುವ ಸಂದರ್ಭದಲ್ಲಿ ಇದನ್ನು ಕೆ.ಎಸ್.ಐ.ಎಂ.ಸಿ.ಯಿಂದಲೇ ಖರೀದಿಸಬೇಕು, ನೀವು ಟಿ.ಎಸ್.ಎಂ.ಎಸ್.ರಿಂದಲೇ ಖರೀದಿಸಬೇಕು ಎನ್ನುವ ಸುತ್ತೋಲೆ ಕೊಡುವುದು ಒಳ್ಳೆಯದಲ್ಲ ಎಂಬುದು ಅನಿಸಿಕೆ. ಮತ್ತೊಂದು ವಿಚಾರವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಜಿಲ್ಲಾ ಪಂಚಾಯಿತಿಯಲ್ಲಿ ಯಾವಾಗಲೂ ಚರ್ಚೆ ಮಾಡುತ್ತೇವೆ. ನಾವು ಸುತ್ತೋಲೆಗಳ ಮೇಲೆ ಅಧಿಕಾರವನ್ನು ಮಾಡುವುದಕ್ಕಾಗುವುದಿಲ್ಲ. ಆಡಳಿತ ಮಾಡಬೇಕಾದರೆ ನಮ್ಮ ಆ್ಯಕ್ಟ್ ಪ್ರಕಾರ ಮಾಡಬೇಕಾಗುತ್ತದೆ. ಆ್ಯಕ್ಟ್ ಏನು ಹೇಳುತ್ತದೆ, ಅದನ್ನು ನಾವು ಒಪ್ಪಲೇಬೇಕಾಗುತ್ತದೆ. ಇಲ್ಲಿ ದಿವಸಕ್ಕೆ ಒಂದು ಸುತ್ತೋಲೆ ಕಳುಹಿಸುವುದು. ಅಲ್ಲಿ ತೆಗೆದುಕೊಳ್ಳಿ, ಇಲ್ಲಿ ತೆಗೆದುಕೊಳ್ಳಿ, ಅಲ್ಲಿಗೆ ಬನ್ನಿ, ಇಲ್ಲಿಗೆ ಬನ್ನಿ, ಅದಕ್ಕೆ ಖರ್ಚು ಮಾಡಿ, ಇದಕ್ಕೆ ಖರ್ಚು ಮಾಡಿ ಎನ್ನುವ ಈ ಸುತ್ತು ಬಳಸಿ ಸುತ್ತೋಲೆಗಳಿಂದ ಬಹುಶಃ ಒಂದು ನಿರೀಕ್ಷಿತ ಮಟ್ಟದಲ್ಲಿ ಜಿಲ್ಲಾ ಪಂಚಾಯಿತಿ ಆಗಲೀ ತಾಲ್ಲೂಕು ಪಂಚಾಯಿತಿ ಸಮಿತಿಯಾಗಲೀ ಆಡಳಿತವನ್ನು ಸಮರ್ಪಕವಾಗಿ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತೇನೆ. ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳಿಗೆ ಒಂದು ಶಕ್ತಿಯನ್ನು ತುಂಬಬೇಕಾದರೆ ಕೆ.ಇ.ಬಿ. ಮೇಲೆ ನಿಮಗೆ ಹಿಡಿತ ಬೇಕು. ನಿಮಗೆ ಕೆ.ಇ.ಬಿ. ಮೇಲೆ ಹಿಡಿತ ಇಲ್ಲದಿದ್ದರೆ ನೀವು ಸಾಧನೆಯನ್ನು ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ಗ್ರಾಮಗಳಲ್ಲಿ ಒಂದು ಸ್ಟ್ರೀಟ್ ಲೈಟನ್ನು ಸರಿ ಮಾಡುವುದಕ್ಕಾಗುವುದಿಲ್ಲ. ಒಂದು ಬಾವಿಗೂ ಕರೆಂಟ್ ಕೊಡುವುದಕ್ಕಾಗುವುದಿಲ್ಲ. ದಶಲಕ್ಷ ಬಾವಿಗಳಿಗೆ ಕರೆಂಟನ್ನು ಕೊಡುವುದಕ್ಕಾಗುವುದಿಲ್ಲ. ಯಾವ ಸಾಧನೆಗಳನ್ನು ಮಾಡುವುದಕ್ಕೆ ಹೋದರೂ ಕೆ.ಇ.ಬಿ. ಮೇಲೆ ಹಿಡಿತ ಇಲ್ಲದಿದ್ದರೆ ಮಾಡುವುದಕ್ಕಾಗುವುದಿಲ್ಲ ಎನ್ನುವ ಮಾತನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಭಾಗ್ಯಜ್ಯೋತಿಯ ಬಗ್ಗೆ ಬಹಳಷ್ಟು ಮಾತನಾಡಿದರು ಕೆ.ಇ.ಬಿ.ಯವರು. ಒಂದು ಭಾಗ್ಯಜ್ಯೋತಿ ಕೊಡಬೇಕಾದರೆ ಕಂಬವಾಗಬೇಕು, ವೈರ್ ಆಗಬೇಕು ಎಂದು ಕಥೆ ಹೇಳುತ್ತಾರೆ. ಬಿ.ಜಿ.ಬಣಕಾರ್‌ರವರು ಬರೆದಿರುವ ಪತ್ರದಲ್ಲಿ ಲಕ್ಷಾಂತರ ರೂಪಾಯಿ ಬಿಲ್ಲುಗಳ ಬಾಕಿ ಇರುವ ಸಂದರ್ಭದಲ್ಲಿ ಆರ್ಥಿಕವಾಗಿ ಹಿಂದುಳಿದ ಜನರನ್ನು ದಮನಿಸತಕ್ಕಂಥ, ಅವರನ್ನು ಶೋಷಣೆ ಮಾಡುವ ವ್ಯವಸ್ಥೆಯನ್ನು ನಾವು ಇದನ್ನು ಟೀಕಿಸಲೇಬೇಕಾಗುತ್ತದೆ. ಮತ್ತು ಈ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಕಲ್ಯಾಣಕ್ಕಾಗಿ ಕಾದಿರಿಸಿದಂಥ ಹಣ, ಅದು ಉಪಯೋಗವಾಗದೇ ಇರುವುದಕ್ಕೆ ಕಾರಣವೇನು? ಬೇರೆ ಬೇರೆ ಬೇಡವಾದ್ದಕ್ಕೆ, ಬೇಕಾದ್ದಕ್ಕೆಲ್ಲಾ ಬಹಳಷ್ಟು

ತನಿಖೆಯನ್ನು ನಾವು ಮಾಡುತ್ತೇವೆ. ಇದರ ಬಗ್ಗೆ ಏಕೆ ತನಿಖೆ ಮಾಡುವುದಿಲ್ಲ? ಇದಕ್ಕೆ ಯಾರು ಅಡೆತಡೆಯನ್ನು ತಂದಿದ್ದಾರೆ. ಇದನ್ನು ಯಾರು ಸಮರ್ಪಕವಾಗಿ ನಿಗದಿತ ಉದ್ದೇಶಕ್ಕಾಗಿ ಖರ್ಚು ಮಾಡಲಿಕ್ಕೆ ಯಾರಿಂದ ತೊಂದರೆಯಾಗುತ್ತದೆ ಅಥವಾ ಅದರ ಜವಾಬ್ದಾರಿಯನ್ನು ಯಾರು ಹೊತ್ತುಕೊಳ್ಳುತ್ತಾರೆ? ಒಂದು ವೇಳೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಹೊತ್ತುಕೊಳ್ಳಬೇಕು. ಇಲ್ಲದಿದ್ದರೆ ತಾಲ್ಲೂಕು ಎಕ್ಸಿಕ್ಯೂಟಿವ್ ಆಫೀಸರ್ ಹೊತ್ತುಕೊಳ್ಳಬೇಕು. ಇಲ್ಲದೇ ಇದ್ದರೆ ಯಾವ ಅಧಿಕಾರಿಗಳು ಇದರ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಾರೆ ಎನ್ನುವ ವಿಚಾರಗಳನ್ನು ನೋಡಬೇಕಾಗುತ್ತದೆ. ಮತ್ತೊಂದು ಈ ಪಂಚಾಯಿತಿಯಲ್ಲಿ ಪಕ್ಷರಾಜಕೀಯ ಬೇಡ ಎಂದು ನಮ್ಮ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನುಕೊಟ್ಟಿದ್ದಾರೆ. ಬಹುಶಃ ಇದನ್ನು ಕೇಳಿದರೆ ಮಂಗಳೂರು ಜಿಲ್ಲಾ ಪಂಚಾಯಿತಿಯವರು ಅಧ್ಯಕ್ಷರ ಮೇಲೆ ಅವಿಶ್ವಾಸ ನೋಟೀಸನ್ನು ಕೊಟ್ಟಿದ್ದಾರೆ. ಒಂದು ಕಡೆ ನಮ್ಮ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಡುತ್ತಾರೆ. ಇಲ್ಲಿ ಇವರು ನೋಟೀಸನ್ನು ಕೊಡುತ್ತಾರೆ. ಬಹುಶಃ ನಾನು ಮುಖ್ಯಮಂತ್ರಿಗಳ ವಾದವನ್ನು ಒಪ್ಪುವವನು. ಒಂದು ಹತ್ತು ತಿಂಗಳಿಗೆ ನಾವು ಅಧಿಕಾರವನ್ನು ಬಿಟ್ಟುಕೊಡದೇ ಇರುವ ಜನರು ನಾವು ಅಧಿಕಾರದ ಬಗ್ಗೆ, ಬೆಳವಣಿಗೆಯ ಬಗ್ಗೆ ಗ್ರಾಮದ ಬಗ್ಗೆ ಮಾತನಾಡುವುದು ಅಷ್ಟು ಸಮಂಜಸವಲ್ಲ ಎನ್ನುವ ಮಾತನು ಹೇಳುತ್ತೇನೆ. ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸುತ್ತಾ ಮೈಸೂರು ಜಿಲ್ಲಾ ಪಂಚಾಯಿತಿ ಅವ್ಯವಹಾರ ಆರೋಪ, ಸಿ.ಓ.ಡಿ. ತನಿಖೆಗೆ ಒತ್ತಾಯ ಅದೇ ರೀತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕರಿಹಲಗೆ ಯೋಜನೆಯಲ್ಲಿ ಸುಮಾರು ಮೂರು ಕೋಟಿ ರೂಪಾಯಿ ಅವ್ಯವಹಾರವಾಗಿದೆ. ಕಳಪೆ ಸ್ವತ್ತುಗಳು ಬಂದಿವೆ. ಅದರಲ್ಲಿ ಎಷ್ಟು ರಿಕವರಿಯಾಗಿದೆ ಎಂದು ಹೇಳಿದರೆ ಕರಿಹಲಗೆ ಯೋಜನೆಯಲ್ಲಿ ಯಾರೆಲ್ಲ ಆಪಾದಿತರು ಇದ್ದಾರೆ ಎಂದರೆ ರಾಜ್ಯವಲಯದ ಮುಂದುವರಿದ ಯೋಜನೆಯಲ್ಲಿ ಡಿಡಿಪಿಐ ಯಿಂದ ಎಲ್ಲಾ ಹೊಸ ಎ.ಇ.ಓ.ಗಳು ಈ ಒಂದು ಆಪಾದನೆಗೆ ಒಳಪಟ್ಟಿದ್ದಾರೆ. ಅದೇರೀತಿಯಲ್ಲಿ ಬಹಳಷ್ಟು ಅವ್ಯವಹಾರಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಹ ಆಗಿದೆ. ಇವುಗಳನ್ನೆಲ್ಲಾ ಸಮಗ್ರ ತನಿಖೆ ಮಾಡಿಸಿ ಸ್ವಲ್ಪ ಚುರುಕುಮುಟ್ಟಿಸಿ ಒಂದು ಒಳ್ಳೆಯ ಆಡಳಿತವನ್ನು ಕೊಡಬೇಕು ಎನ್ನುವ ಬಹಳಷ್ಟು ನಿರೀಕ್ಷೆ ನಾವೂ ಸಹ ನಿಮ್ಮಿಂದ ಮಾಡುತ್ತೇವೆ. ಅದಕ್ಕೆ ನೀವು ಸ್ಪಂದಿಸುತ್ತಿದ್ದೀರಿ. ಆದರೆ ನಾನು ವೈಯಕ್ತಿಕವಾಗಿ ಹೇಳುವುದಾದರೆ ಈ ಇಲಾಖೆಗೆ ಬಹಳಷ್ಟು ಚುರುಕನ್ನು ಮುಟ್ಟಿಸುವ ಕೆಲಸ ನೀವು ಮಾಡಬೇಕಾಗಿದೆ ಎನ್ನುವ ಮಾತನ್ನು ಹೇಳಿ ಅಧ್ಯಕ್ಷರಿಗೆ ಸಮಯ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.